ಅಗಿಲು agilu. = ಅಗಿಲ್, etc. fragrant substances; fragrance. ಕಪ್ಪು ಅಗಿಹ ಅಗಿಲು ಜಾಪಕ, ಕಾಲೀಯಕ, ಕಾಲಾನುಸಾರ್ಯ ಎನಿಸುಗು; ಕಲ್ಲ ಹೂವಿನ ಧೂಪ (benzoin) ಎನ್ನೂ, ಎಪ್ಪರು Nr.; ಕಪಿಚ Mr. 335; see s. ಅಗರು). ಮೃಗಮದದ, ಚನ್ದನದ, ಕರ್ಪುರದ, ಅಗಿಲು ಸಾದು ಜವಾದಿಗಳ ಸಿಮ್ಪುಗಳಿನ್ ಎಸೆದುದು ನೋಡೆ ವಾರವಧೂಟಕಾನಿಲಯ (Bp. 12, 11).— ಅಗಿಲುಗನ್ಧ. = ಅಗರುಗನ್ಧ (St. & Pl.). — ಅಗಿಲುಬಾಗಿಲವಾಡ. N. (Bp. 12, 8).

ಅಗಿಷ್ಟಿಕೆ agiṣṭike. = ಅಗ್ಗಿಟಗೆ. (My.).

ಅಗಿಸು agisu. = ಅಗಯಿಸು. to cause to dig (My.). ಅಗಿಸು! (Bp. 5, 57). ಜನಪನ್ ಆ ಕ್ಷಣಮ್ ಅಗಿಸೆ (5, 58). ತಳವನ್ನು ಅಗಿಸಿದರೆ (B. 4, 120), see Prv. s. ಕುಣಿ 2.

ಅಗಿಸೆ agise. = ಅಗಸೆ (My.).

ಅಗಿಸೆ agise. = ಅಗಸೆ 1. (My.).

ಅಗು agu. 1. = ಆಗು 1. to become, to grow, etc. (Te. ಅಗು, ಅವು). *a very rare* form of ಆಗು. see ಅಕ್ 2. ಅಗುಬುಗನ್ನವನ್ ಇಕ್ಕಲೊಡನೆ ಆ ಬಿಗಿದ ಮಣ್ಣೆಲ್ಲಂ ಮಿಸುಪ ಹೊನ್ನು ಅಗುತಿರಲು (Bp. 31, 12).

ಅಗು agu. 2. = ಅಗುವು, ಪಂಗು, etc. (My.).

ಅಗುಚು agucu. = ಅಗಚು. ಅಗುಸು. (My.). — ಅಗುಚಾಟು. = ಅಗಚಾಟು. (My.).

***ಅಗುಂತಿ agunti.** abundance, excellence. ಧರಾತಳದ ತಿಣ್ಪುಮನಾದಿತ್ಯನ ತೇಜದಗುಂತಿಯುಮಂ ಚಂದ್ರನ ಕಾಂತಿಯುಮಂ Pb. 1, 139 va.

ಅಗುನ್ದಲೆ agundale. extensiveness; greatness, superiority; superior; greatly [ಅವ ಬೆಸನಂ ಬೆಸಸಲ್ ಬಂದಿರ್ ಬರವಿ ನೋಳೀಗಳಗುಂದಲೆಯಾಯ್ತೆನಗಂ Pb. 9, 33; Ap. 1, 50]. (ಪಿರಿದು Śmd. II; ಬಹಳ Ct. I; 101; ಕರಂ ನೆಱೆ, etc., ಪಿರಿದು Kk. 49; ಅಣೆಯರ, etc., 84; ಅಧಿಕ Śm. 58; ಹೆಚ್ಚಾಗಿ G.; Abh. P. 3, 67 va.). ಮೂಲೋಕಕ್ಕೆ ಪೆಮ್ಪಿನ್ದೆ ಅಗುನ್ದಲೆಯಾಗಿ ಇರ್ದುದು (Śmd. 223 Mdb. Ms.). — ಅಗುನ್ದಲೆವಡೆ. -ಪಡೆ. to become excellent, etc. ಗುಣಗಣವನ್ ಅಣೆಯರವನ್ ಎನಿಸೆ, ವೃತ್ತಿ ಬಿತ್ತರವಪ್ಪುಡೆಯೆ, ...ಬನ್ಧಮ್ ಅಗುನ್ದಲೆವಡೆಯೆ, ...ಗದ್ಯಪದ್ಯ ಚಮ್ಪುಪ್ರಮುಖ ಪ್ರಬನ್ಧಂಗಳಂ ಪೇೞ್ವ ಕೇಳ್ವರ ಚಿತ್ತಮಂ ಕವರ್ತೆಗೊಳ್ವ ಕವೀನ್ದ್ರವೃನ್ದಂ (Rśv. 5, 19 va).

ಅಗುರ್ agur. = ಅಗುೞ್ 1, etc. to dig. ಇದು ಕಾಡನೆಯ ನೊರೆಯು! ಭಲ್ಲುಕಂ ಕೆದರ್ದ ಎಡೆಯು ಇದು! ಗಜಂ ಪೋದ ಪಾದಿ ಇದು! ನರಿ ಅಗುರ್ದ ಇದುಂ! ಕಾಡುಗುಱುದುಪ್ಪುಳ್ ಇನ್ತು ಇದು! (Rāghc. 17, 68).

ಅಗುರ agura. = ಹಗುರ. (My.).

ಅಗುರು a-guru. 1. not heavy, light. 2, short, as a syllable (Śmd. 54, 213).

ಅಗುರು aguru. 2. = ಅಗರು, etc. *the dark species of Agallochum* (ಅಗರು, ಕಾಕತುಣ್ಡ Hlā.; ಕೃಷ್ಣಾಗರುಚನ್ದನ, ಚನ್ದಾಳ G.). 2, *the fragrant aloe wood and tree, Aquilaria agallocha* Roxb. 3, *the tree which yields Bdellium, Amyris agallocha.* 4, *a timber tree, furnishing a kind of black wood, Dalbergia sisu* Roxb. 5, the Aśōka tree, Jonesia aśōka Roxb. (Si. 136). 6, another species of plant, the kapile (ಪರಿಮಳಯುಕ್ತಮ್ ಅದ ಅಗುರು, ಪರಿಮಳಾಶೋಕ 136). — ಅಗುರುಚಕ್ಕೆ. a chip or bit of fragrant wood. see ಕರೇ-. —ಅಗುರುಸೊಪ್ಪು. = ಅಗುಳು-, etc. (Si. 142).

ಅಗುರ್ಬು agurbu. = ಅಗುರ್ವು q. v. [ಅಂತು ನೂರ್ವರೊಳೊರ್ವನ ಗುರ್ಬುಂ ಪರ್ಬಿ ಪರಕಲಿಸೆ ಸಂಪೂರ್ಣ ವಯಸ್ಕನಾಗಿ Pb. 1, 131 va.; Ap. 12, 61]. ಪಾಯಿಸಿ ಪೊಯ್ಯೆ ಗೋಱಿಯಿಲರ್, ಒರ್ವರಿನ್ ಒರ್ವರ ಅಗುರ್ಬು (ಒರ್ವರಗುರ್ಬು MS.) ಪರ್ಚೆ (Abh. P. 13, 62).

ಅಗುರ್ವಿಸು agurvisu. to be terrifying or formidable; —to terrify. ಮತ್ತಹಸ್ತಿಗಳ ಮಸ್ತಕದಿಂ, ಬಿದಿರಿಂ, ಫಣೀನ್ದ್ರೋತ್ತಮಾಂಗದಿನ್, ಅಗುರ್ವಿಪ ಪನ್ದಿಯ ಕೋೞ್ಕಳಿಂ ಪತ್ತುವಿಟ್ಟು ಅಗನಿಕಾಯದೊಳ್ ಒಕ್ಕ ಎಳಮುತ್ತನ್ ಆಯ್ದುತ್ತಮ್ ಇರ್ಪ ಶಬರವಿಪ್ರಿಯಕಾಮಿನಿಯರ್ಕಳ್ (Śmd. 142, 166). ನೆಗೆದ ಕುಡಿವಾಲನ್, ಉಣ್ಮುವ ಬಗೆಬಳ್ಳುವ ನಡುವು, ಅಗುರ್ವಿಪ (ನಡುವಗುರ್ವಿಪ MS.) ಅನನಮ್ ಇರೆ, ತನ್ಮೃಗಮಂ ಬೞಿವಿಡಿದು ಅಟ್ಟುತ್ತೆ ಅಗಲದೆ ಪಿಡಿದತ್ತು ಜಾಯಿಲಂ ತದ್ವನದೊಳ್ (Rśv, 5,87). ಧರಿತ್ರಿಯೊಳೆ ಚಾಲಿಪ ಬಾಲಮ್ ಅಗುರ್ವಿಪ ಅನನಂ ... ಎಸೆಯೆ, ತರುಕ್ಷ್ಮದಂಶಕಶತಸಂವೃತಮ್ ಇರ್ದುದು (5, 92). see Abh. P. 3, 54; 13, 31; *cf.* ವಿಗುರ್ಬಿಸು (ವಿಗುರ್ವಿಸು).

ಅಗುರ್ವು agurvu. = ಅಗುರ್ಬು, (ಗುರ್ಬು, ಗುರ್ವು). amazement, terror; a terrible form (*cf.* ಅಗಿ 3; ಅಘೋರ?) [ಅಲ್ಲದೆ ವಿಕ್ರಮದಿಂದೆ ನಿಂದಗುರ್ವೆನಲಿರ್ಪುದು Pb. 1, 26; Ap. 1, 7]. ಒನ್ದು ಉದ್ದಣ್ಡ ಪ್ರಚಣ್ಡಕಣ್ಠೀರವಂ ಗೆಣ್ಪೆನೊಳ್ ವಿಲಯಾಗ್ನಿ ಮೆಯ್ವೆತ್ತುದು ಎಮ್ಪ ಅಗುರ್ವನ್ (ಎಮ್ಪುಗುರ್ವನ್ MS.) ಒಳಕೊಣ್ಡು (Rśv. 5, 115 va). see Abh. P. 7, 114; 13, 80; 14, 6 va; Grj. 1, 99. — ಅಗುರ್ವುವಡೆ. -ಪಡೆ. to get a terrible form (Abh. P. 13, 54 va).

ಅಗುಲು agulu. = ಅಗಲ್. to shake, to move, to become loose, as a peg (My.).

ಅಗುವು aguvu. = ಅಗು 2, (My.).

ಅಗುಸು agusu. = ಅಗುಚು. (My.).

ಅಗುಸೆ aguse = ಅಗಸೆ, etc. (My.). ಜವಳಿಗದವಂ ದ್ವಾರಬನ್ಧದ ಹವಣಿಗೆ ಆ ಬಾಗಿಲೊಳ್ ಅಮರ್ಚಿಸಿ, ಅವಕೆ ಅಗುಸೆಯಂ ನಿಲಿಸಿದನು (Bp. 16, 9). ಹಟ್ಟಿಯೊಳ್ ಅಗುಸೆಯಂ ಹುಗಲೀಯದೆ ಇಕ್ಕಿದನು (60, 26). ಹಟ್ಟಿಯ ಮುಖದ ಅಗುಸೆಯಂ ತೆಱೆಯಲೊಡನೆ (60, 31).

***ಅಗುಳ್ agul** = ಅಗುಳು 2. ಲವಣಾಂಬುರಾಶಿ ಕುಕ್ಕುಜಗುದಿವಲ್ಲಿ ಕೊಟ್ಟುದಿಯೆ ಮೇಗೆ ಸಿಡಿಲ್ದಗುಳಂತೆ ಕೂಡೆ ತತ್ತಳಗುದಿಯುತ್ತಮಿರ್ಪ Pb. 11, 153. (T. ಅವಿಟ್ single grain of boiled rice). @ ಇದು 'ಅಗುಟ್' ಪದಕ್ಕೆ ತಪ್ಪಾಗಿ ಬಿದ್ದಿರಬೇಕು.

***ಅಗುಳಿಸು agulisu** = ಅಗುಟಿಸು. ಸದ್ಯೋಜಾತನ ಜಟಾಮುಕುಟದ ಸುತ್ತಿರ್ದ ಫಣೀಂದ್ರನಲ್ಲದೆ ಮತ್ತಾರೂ ಅಲ್ಲನೆಂದು ಶಿಖರವ ಮೊದಲುಗೊಂಡ ಗುಳಿಸಲು. Cv. 191.

***ಅಗುಳು aguḷu. 1.** = ಅಗುಟ್. ಪರಮೂತ್ರದ ಕುಳಿಯನಗುಳುವಂಗೆ ಚಲಿಮೆಯುಗ್ಗಿಣಿಯೆಂಬ ಕಟ್ಟಳೆ ಏತಕಯ್ಯಾ Cv. 93.

ಅಗುಳು aguḷu. 2. = ಅಗಳು. a grain of boiled rice (My.). 2, a small lump of rice kneaded into a ball (ಪುಲಾಕ, ಭಕ್ತಸಿಕ್ಥಕ, ಕೂಟ ಅಗುಳು Nr.; Si. 405; ಪುಲಕ, ಕೂಟಗುಳು Nn. 145; ಪುಲಕ, ಅನ್ನದ ಅಗುಳು Mr. 486; *cf.* ಅವುಡು 3). ಅಗುಳು ನುಂಗಲಿಕ್ಕೆ ಹೀರದವನ ಬಾಯಲ್ಲಿ ಕಡಬು ಹೆಟ್ಟಿದ (Prv.).

ಅಗುಳು aguḷu. = ಅಗರು etc. —ಅಗುಳುಸುಣ್ಣಿ. = ಅಗಳು-, etc. a climbing plant possessing various medicinal properties, Clypea hernandifolia W. & A. (ಪಾಠೆ, ಅಪ್ರುಷ್ಠೆ, ವಿದ್ಧಕರ್ಣಿ, ಪಾಪಚೇಲಿ, ಪ್ರಾಚೀನೆ, ರಸೆ, etc. Nr.; ಪಾಠೆ Mr. 142). 2, a wild plant, Zingiber zerumbet Roscoe (St. & Pl.). —ಅಗುಳುಸೊಣ್ಣಿ. = ಅಗುಳುಸುಣ್ಣಿ, etc. (Si. 142).

ಅಗುೞ್ aguḻ. 1. = ಅಗೆೞ್ 1, etc. P. p. ಅಗುೞ್ದು. to dig [ಅಗುೞ್ದರಲಾ ಕುೞಿಯೊಳ್ ತೊಟ್ಟಗೆ ನಿಧಿ ಕಂಡಂತೆ Pb. 1, 97; Vr. 29, 10]. (ಖನನ Śmd. Dh.; ಅಗಿ G.). ಅಗುೞ್ದಂ (Śmd. 49. 55). ಅಗುೞ್ದಪಂ (55). ಅಗುೞ್ಗುಂ (55). ಅಗುೞ್ಗೆ (55). ವೇದಿಕೆಯನ್ ಇನ್ನು ಅಗುೞುತ ಇರ್ದಪೆ, ಮಾಣದೆ, ಒಬ್ಬಳೆ ನೀನ್ (Bp. 47, 10). ಒಱತೆಯನ್ ಅಗುೞವೆ ಇರು! (20).

ಅಗುೞ್ aguḻ. 2. P. p. ಅಗುೞ್ದು. to sink in water, to be immersed, to dive (ಜಲನಿಮಜ್ಜನ Śmd. Dh.; T. ಅಮಿೞ್, see ಅವುಗು 2; Mhr. ಅಂಘೂಳ, bathing). ಅಗುೞ್ದನ್ ಎನ್ದು, ನೀರ್ನೆಲೆ ದಪ್ಪಿದಂ (Śmd. I).

ಅಗುೞಿ aguḻi = ಅಗೞಿ, etc. Tbh. of ಅರ್ಗಲ (Śmd. 30. 364). a bolt or pin; a (wooden) beam or bar for locking a door (ತಾೞ್ Śmd. I; Śm. 113; ಪರಿಘ, ಅರ್ಗಲ Mr. 199; My.).—ಅಗುೞಿಗನ್ನ. -ಕನ್ನ. a hole made in the wall to remove the door-bar (for the purpose of robbery). ಘನದ ಹೊಸತಿಲುಗನ್ನವಂ ಘುಮ್ಮನೆ ಅಗದು, ಅಗುೞಿಗನ್ನಮುಂ ಸುಮ್ಮನೆ ಅಗದು (Bp. 31, 5). ಅಗುೞಿಗನ್ನವನ್ ಇಕ್ಕ ಲೊಡನೆ (31, 12).

ಅಗುೞಿಸು aguḻisu. to cause to dig (ಖನನ Śmd. Dh.; (My.). ಅಗೞುಗಳನ್ ಅಗುೞಿಸಿದಂ (Bp. 16, 9). ಪಿರಿಯ ನಿಡುಬಾವಿಗಳನ್ ಅಗುೞಿಸಿದಂ. (16, 11).

ಅಗುೞು aguḻu = ಅಗುೞ್ 1. (My.; ಅಗಿ G.).

ಅಗುೞ್ಚು aguḻcu. to cause to sink in water, to immerse (ಜಲಾಶಯಮುಗ್ನ Śmd. Dh.).

ಅಗೂಢ a-gūḍha. unconcealed, manifest, transparent. 2, a kind of prasanna in poetic art (Kāvy. III, 1, A, 15).

-ಅಗೆ age. 1. = -ಅಕೆ, etc. see -ಅಗಿನ್ತ.

ಅಗೆ age. 2. = ಅಗಿ 1. to dig (ಖನನ Śm. 80; My.). P. ps. ಅಗದು q. v. ಅಗೆದು. ಸರಸರನೆ ಸತಿ ಗೋಷ್ಪದಿನ್ ಅಗೆವುದಱ ವಿಧನಿಯಂ ಕೇಳಿ (Bp. 47, 8) ನಾನ್ ಇಲ್ಲಿ ಒಱತೆಯನ್ ಅಗೆದೊಡೆ (v. 21). ಅಗೆವುತ ಇರ್ದ ಹಳು (v. 26). ಒಱತೆಯನ್ ಅಗೆದಹಳು (v. 27). ಶೀಲವನ್ತರು ಮನೆಯೊಳ್. ಒಱತೆಯನ್ ಅಗೆದರು ಉಣ್ಬೇ? (v. 49). —ಅಗೆ ಅಗೆ! rep. (Bp. 23, 34).

ಅಗೆ age. 3. = ಅಗಿ 5. what has grown or germinated; *cf.* ಅಗು 1): a seedling; a shoot from the root of a plant or tree; a sprout [ತಾರಗೆಗಳಗೆಗಳಂತಿರೆ ತಾರಾ ಪಥದೊಳ್ ನಿರಂತರಂ ತುಱುಗಿರೆ Ap. 6, 54]. (ಅಂಕುರ Śm. 22. 80; Abh. P. 3, 138; C.; ಮೊಳಕೆ, ಸಸಿ, ವಲಜ G.; Tu. ಅಗ್ಗ); especially seedlings of rice, tobacco, pepper, etc. ready for being transplanted (My.; Te. ಆಕು) —ಅಗೆ ಕಟ್ಟು. to raise seedlings in pots, etc. (My.). —ಅಗೆ ಬಿಡು. to sow seed for raising seedlings (My.). ಅಗೆ ಮಾಡು. to raise seedlings (My.). —ಅಗೆವೊಯ್. -ಪೊಯ್. to get shoots (Rśv. 11, 120).

-ಅಗೆ age. 4. = -ಅನ್ತೆ 1. (probably an infinitive of ಅಗು "so that it becomes or is"; *cf* ಅಗಿ No. 2). a suffix to form adverbs, *e. g.* ನೆಟ್ಟಗೆ, ಸುಮ್ಮಗೆ, ಕಮ್ಮಗೆ, ಬಿನ್ನಗೆ (Śmd. 389).

ಅಗೆ age. 5. = ಹಗೆಯ, etc. (My.).

ಅಗೇನ್ದ್ರ aga-indra. a principal mountain, any one of the seven mountains in Bhārata. 2, the number seven (Ch.).

ಅಗೇನ್ದ್ರಜೆ agēndra-je. Pārvatī (J. 15, 15).

ಅಗೊ a12-ge1-o4. = ಅಕೊ, etc. (C.).

ಅಗೋ a12-ge1-ō3. = ಅಗೊ, etc. (C.). ಗೆಳೆಯಾ, ಅಗೋ, ದೂರದಲ್ಲಿ ಒಬ್ಬ ಬೇಟೆಗಾಱನೂ ನಾಲ್ಕಾಱು ನಾಯಿಗಳೂ ಈ ಹಾದಿಯಲ್ಲಿ ಬರುತ್ತವೆ, ನೋಡು! (B. 4, 19). ಅಗೋ, ಆ ಬಾವಿಯ ಮೇಲೆ ಜೋತಾಡುವ ಗೊಂಚಲುಗಳನ್ನು ಕೊಯಿದು ಕೊಣ್ಡು ಹೋಗು! (4, 180). ಅಗೋ, ಅಲ್ಲಿ ಒಬ್ಬ ಮನುಷ್ಯ ಬರುತ್ತಾನೆ (4, 182).

ಅಗೋಚರ a-gōcara. not obvious, imperceptible by the senses; wondrous. 2, anything that is beyond the cognizance of the senses. (Bp. 6, 8; 8, 51; 11, 22; 54, 58; 55, 53; J. 2, 55; see ವಾಚಾಮ್-).

ಅಗೋಪಗ a-gōpa-ga. going without a superintendent; N. of a vṛitta (Ch.).

ಅಗೌಕಸ aga-ōkasa. (i. e. ōkas) whose home are trees: a monkey Śśv 3, 34).

ಅಗೌರವ a-gaurava. absence of grandeur; degradation, dishonour (My.).

ಅಗ್ಗ agga. 1. = ಹಗ್ಗ. Tbh. of ಅರ್ಘ (Śmd. 345. 358). worth, value, price. 2, proper price, the cheapness of commodities; cheapness; cheap (C.; Te. ಅಗ್ಗುವ; Tu. ಅಗ್ಗ). 3, cheapness, worthlessness (C.; Tu.). 4, a respectful offering of various ingredients or of water only. ಅಗ್ಗವಾದ ಧಾನ್ಯಗಳಲ್ಲಿ ಜನರಿಗೆ ಉಣ್ಣಾದ ಆದರಣೆ (ನೀವಾರ Si. 432). ಜಾಜಿಯ ಕಾಯಿ ಬಹಳ ಬೆಳದರೆ ಅಗ್ಗವಾಗುವವು (B. 3, 53). ಯನ್ತ್ರಗಳಿನ್ದ ಹುಟ್ಟುವ ಅಱವೆ ಈ ದೇಶಕ್ಕೆ ಬನ್ದು ಬಹು ಅಗ್ಗವಾಗಿ ಮಾಱ ಹತ್ತಿದ್ದಱಿನ್ದ (4, 28). ವ್ಯಾಪಾರ ಮಾಡುವವರು ಆ ಪದಾರ್ಥಗಳು ಅಗ್ಗವಾದ ಸಮಯ ನೋಡಿ (5, 101). ಅವರು ಅಗ್ಗವಾದಾಗ, ಕಾಳುಕೊಣ್ಡು, ತುಟ್ಟಿಯಾದಾಗ ಮಾಱುತ್ತಾರೆ (5, 102). see Prv. s. ಪೆಗ್ಗು. — ಅಗ್ಗದವ. -ಅವ. a mean or lewd man (C.). — ಅಗ್ಗದವಳು. -ಅವಳು. a low woman (C.). —ಅಗ್ಗಪಾಡು. a cheap manner, cheapness (S. Mhr.). —ಅಗ್ಗಾಳು. a low man (R.).

ಅಗ್ಗ agga. 2. Tbh. of ಅಗ್ರ. foremost; first. 2, pre-eminent, best. 3, excessive; great. the word is generally used as a noun conveying the meaning of the mentioned adjectives, [ಉದಗ್ರಾಶ್ವಂಗಳಂ ತಕ್ಕಿನಗ್ಗದ ಬಾಡಂಗಳನಾಯ್ದುಕೊಟ್ಟು Pb. 2, 53]. *e.g.* in Bp. 5, 40; 6, 7. 22; 19, 30; 21, 44; 22, 8. 66; 28, 46; 31, 4; 42, 25; 47, 2; 50, 25; 58, 62. ತೆಗೆದುದು ಅಗ್ಗದ ತಮ್ಮು (Bh. 1, 5, 5). ಅಗ್ಗದ ಪುಣ್ಯದ

ಒಡಲ್ (J. 28, 55). ಅಗ್ಗದ ಅರಣ್ಯ (Rśv. 6, 34). ಅಗ್ಗದ ಶತ್ರುಗಳ್ (Bh. 1, 8, 34). — ಅಗ್ಗದವ. -ಅವ. an eminent man; a chief soldier (ಭಟ, ಯೋಧ, ಯೋದ್ಧೃ Si.). — ಅಗ್ಗಯ್ಯ. -ಅಯ್ಯ. N. see ಶೀಲವನ್ತ-.

ಅಗ್ಗ agga. 3. = ಹಗ್ಗ. 2 a rope. (My.; T.). see ಅಗ್ಗರಣೆ.

ಅಗ್ಗರಣೆ aggaraṇe. = ಒಗ್ಗರಣೆ. (My.).

ಅಗ್ಗರಣೆ agga3-raṇe. a rope, a tie (ದಾಮು, ಹಗ್ಗ Kk. 70; ದಾವೆ, ರಜ್ಜು Śs.; see ರಣೆ). ಪಿಂಗಾಲ್ಗೆ ತೊಡರ್ಚಿದ ಅಗ್ಗದ ಅಗ್ಗರಣೆಯಂ ಛಟಛಟನೆ ಕಿಱ್ತು, ಕಿಳಿರ್ದು (Rśv. 6, 11 va).

***ಅಗ್ಗಲ aggala.** = ಅಗ್ಗಳ. ಪತಿಭಕ್ತಿಯ ಮೈಮೆಯ ಮಾನಸಿಕ್ಕೆಯಗ್ಗಲದ ಪೊಗೞ್ತೆ ತನ್ನದೆನೆ Ap. 1, 72.

ಅಗ್ಗಲಿಸು aggalisu. = ಅಗ್ಗಳಿಸು q. v. [ನಿಲಿಸಿ ಲಘುಪದಮನದನಗ್ಗಲಿಸಿರೆ ಮತ್ತೊತ್ತಿ ಬರ್ಪ ಪದಮಂ Kr. 2, 6; Pb. 5, 30; Ap. 7, 46]. (ಪೆರ್ಚುಗೆವಡೆ Śmd. 187 Cm.; ವೆಗ್ಗಳಮ್ ಆಗು 209 Cm.; ವೆಗ್ಗಳಿಸು 365 Cm.; Te. ಅಗ್ಗಲಿಂಚು). ಅಲರ ಪೊಸಗಮ್ಪಿನಿನ್ದೆ ಎಮಗೆ ಅಲಮ್ಪಿನ್ ಅಗ್ಗಲಿಸಿ, ನೀನೆ ರಕ್ಷಿಪುದು! (Cpr. 7, 55).

ಅಗ್ಗವಣಿ aggavaṇi. = ಅಗಿಣಿ, ಅಗ್ಗಿಣಿ. water. — it seems more than probable that ಅಗ್ಗವಣಿ, etc. are based on ಅಗ್ಗ 1, No. 4 (ಅರ್ಘ, ಅರ್ಘ್ಯ), a respectful offering of *water*. [Tbh. of ಅರ್ಘ್ಯಪಾನೀಯ. ತೊತ್ತಿನ ಕೈಯಲ್ಲಿ ಅಗ್ಗವಣಿಯ ತಂದಿರಿಸಿ Cv. 74]. ಅಗ್ಗವಣಿ occurs, *e. g.* in Bp. 12, 33. 34; 16, 6; 24, 2. 54; 30, 9; 47, 15; 53, 46; 55, 28.

ಅಗ್ಗಷ್ಟಿಗೆ aggaṣṭige. = ಅಗ್ಗಿಟಗೆ, etc. ಅವರ ಮನೆಗಳಲ್ಲಿ ಬೆಂಕೀ ಇಡುವ ದಕ್ಕೆ ಗೋಡೆಯೊಳಗೆ ಮಾಡಿದ ಕಬ್ಬಿಣದ ಅಗ್ಗಷ್ಟಿಗೆ ಇರುತ್ತದೆ (B. 5, 296).

ಅಗ್ಗಳ aggaḷa. (Śmd. 49). = ಅಗ್ಗಳೆ, ಅರ್ಗಳ q. v. (My.; Te. ಅಗ್ಗಲ; *cf.* ಅಗ್ಗಳಿಕೆ). [ಸಮುಚ್ಚಯೋದ್ವಾವಕ ಕ್ರಮವಿಚಾರದೆ ದೋಷವಿದಗ್ಗಳಂ Kr. 1, 132; Ap. 1, 55; Pb. 1, 10]. ಮೇರುವಿಂಗೆ ಈತನ್ ಅಗ್ಗಳಂ (159, o. r. ಅರ್ಗಳಂ). ಕೊಮ್ಬು ಇಱಿಪಿದ ಮರದಿನ್ದೆ ಅಗ್ಗಳಂ ತಿಣ್ಣಮ್ ಅದಂ (289). ಹಲವು ಲಿಪಿಗಳನ್ ಓವ ಬಲ್ಲ ಅಗ್ಗಳದ ಕರಣಕರಂ ಕರಸಿ (Bp. 5, 53). ಅಗ್ಗಳದ ಘಟ ಕಳಸಾದಿಗಳ್ (8, 37). ಲೆಕ್ಕಕೆ ಅಗ್ಗಳಮ್ ಅಗಿ ಇರಲು (31, 29). ಗುಗ್ಗಳಂ ಸಾಮಾನ್ಯಮ್ ಆಯ್ತೇ? ಅಗ್ಗಳವನ್ ಇಕ್ಕಿದೊಡೆ ಅದಱಿನ್ದೆ ಅಗ್ಗಿ ತಗ್ಗಿದುದೋ? (47, 16). ಅಗ್ಗಳನ (the poet ಅರ್ಗಳ) ಮುನ್ದೆ ವೆಗ್ಗಳನುಣ್ಟೇ? (Prv.). [ಅಗ್ಗಳಗಣ್ಣು.-ಕಣ್ಣು. the superior eye. ತೋಱಿದನೆಱಕದೆ ಹರಿಗಂಗೆ ರುದ್ರನಗ್ಗಳಗಣ್ಣಂ. Pb. 8, 23].

ಅಗ್ಗಳಿಕೆ aggaḷike. greatness; great power (ಅತಿಶಯ, ಸೊಮ್ಪು, etc. Śs.; Te. ಅಗ್ಗಲಿಕೆ, power; sport; eagerness). [ತಣಿವರ್ ದ್ವಿಜಮುಖ್ಯರಪ್ಪದಗ್ಗಳಿಕೆ ಪೊಡೆದ್ದು ಪರ್ವುವುದು ಕೀರ್ತಿ Pb. 6, 19; Ap. 1, 48]. ಶಿವಮರುಳನ್ ಅಗ್ಗಳಿಕೆಯೊಳಗೆ ಆಡುವವರಂ (Bp. 4, 9). ಅಗಸ್ತ್ಯನು ಮೆಟ್ಟಿದಡೆ ಭೂತಳಕೆ ಕುಗ್ಗಿದ ವಿನ್ಧ್ಯನಗದ ಅಗ್ಗಳಿಕೆ ಎನ್ತುಟು? (19, 26). ಛಲದ ಭಕ್ತಿಯ ಮಹತ್ವದ ಒನ್ದು ಅಗ್ಗಳಿಕೆಯಂ ತಾನ್ ಅಱಿದುದುಮ್ ಅಱಿಯದ ಪೊಲು (61, 3). ವಿಪ್ರಜಾತಿಗೆ ಸನ್ದುದು ಇನ್ನು ಅಗ್ಗಳಿಕೆ (Bh. 1, 10, 39). See Bh. 1, 1, 9; 8, 26, 2, 5; C. Bp. 42, 24; Rām. 5, 9, 2; J. 8, 24; 12, 27; 14, 4; 20, 4; 29, 9, 37.

ಅಗ್ಗಳಿಸು aggaḷisu. = ಅಗ್ಗಲಿಸು q. v. to be or become pre-eminent, abundant or redundant; to go beyond measure; to make great efforts; to be superior to, to excel. [ಕಾಂಚೀ ಕಳಾಪಮಂ ಕಟ್ಟಲಣಮ ನೆಱೆಯದಿದೆಂದಗ್ಗಳಿಸಿ ಕುಳಿಕೆಗಳಿನೇಂ ಕಣ್ಗೊಳಿಸಿದುದೋ Pb. 1, 143; Ap. 1, 68]. ಅಲರುಗಣೆಯನ ದೊಣೆಗಳಿನ್ದ ಅಗ್ಗಳಿಪ ಕಿಱುದೊಡೆದೊಡೆಗಳ್ ಎಸವವು (Bp. 4, 18). ಅಗಸದೊಳ್ ಎಲ್ಲೆಡೆಯೊಳು ಬಲಿದು, ಬೆಳುದಿಂಗಳ್ ಅಗ್ಗಳಿಸೆ (12, 37). ಜೋಗುಳವ ಅಗ್ಗಳಿಸಿ ಹಾಡುತ (15, 14). ಸೊಮ್ಮು ಅಗ್ಗಳಿಸೆ (32, 39). ಜಯಜಯನಿನದಮ್ ಅಗ್ಗಳಿಸೆ (51, 62). ಅಗ್ಗಳಿಸಿ, ತಮ್ಮಂ ನಾಯ್ಗಳಿಗೆ ಕೀೞ್ಮಾಡಿ ನುಡಿದೆ, ಅಲ? (55, 43), ಮೊತ್ತಮ್ಪೆತ್ತು, ಮುತ್ತಿ, ಲಗ್ಗೆಗೆ ಅಗ್ಗಳಿಸಿ ಇರ್ಪಾಗಳ್ (Rśv. 6, 116 va). see further Abh. P. 13, 35; Bp. 38, 39; 50, 25. 57; 52, 41; 56, 6; 57, 74; 58, 34; 59, 13; 60, 35.

ಅಗ್ಗಳೆ aggaḷe. = ಅಗ್ಗಳ, etc. (ಅಧಿಕ Śs.) [dignity, pride. ಜಂಗಮ ನಾನೆಂಬ ಅಗ್ಗಳೆಯಿನ್ನೆಂತೊ. Cv. 905]. ಪೊಡವಿಯೊಳ್ ಎನ್ನನ್ ಅಗ್ಗಳೆಯ ಕವಿಮುಂಗನ್ ಎನಿಸೂದು (Mr. 539). see Bh. 8, 23, 44; J. 7, 46; 8, 8. — ಅಗ್ಗಳೆಯ. ಅಗ್ಗಳೆ-ಅ 3. a great or powerful man (ಬಲ್ಲಿದಂ Bhn, 13. ಅಲಘುಮುನಿಮಾತಂಗನ್ ಎಮ್ಬ ಅಗ್ಗಳೆಯಂ (Bp. 57, 72). see J. 13, 21; 17, 12; 21, 5.

ಅಗ್ಗಳಿಕೆ aggaḷike. Tbh. of ಅರ್ಗಳಿಕೆ. a bolt or bar for fastening a door (ಲಾಳವಿಣ್ಡಿಗೆ Śmd. I, o. rs. ಅರ್ಗಳಿಕೆ, ಅರ್ಗಳ). 2, a certain implement (ಅವುಜದ ಮುಟ್ಟು Śmd. I).

ಅಗ್ಗಿ aggi. = ಅಗಿ, ಅಗಿನಿ, ಹಗ್ಗಿ, Tbh. of ಅಗ್ನಿ (Śmd. 351; Śm. 11; Ct. II, 95). fire (ಕಿಚ್ಚು Kk. 21). — ಅಗ್ಗಿಮೊಗ. = ಅಗ್ನಿಮುಖ. a fire-face. — ಅಗ್ಗಿಮೊಗದವ. -ಅವ. a fire-faced being, a deity (ಸುರ Śm. 8). — ಅಗ್ಗಿವಳದೆಣ್ಣೆ. probably ಅಗ್ಗಿ-ಬಲದ ಎಣ್ಣೆ. oil with the power of burning, oil made hot, or oil set on fire (ಉರಿಯೆಣ್ಣೆ Kk. 77). *Cf.* ಉಗ್ಗಿವಳದೆಣ್ಣೆ s. ಉಗ್ಗಿ 1.

ಅಗ್ಗಿಗ aggiga. = ಅಗ್ಗ2 -ಇಗ, or Tbh. of ಅಗ್ರಗ. a king (ಅರಸು Ct. I, 5).

ಅಗ್ಗಿಟಿಕೆ aggiṭike. = ಅಗ್ಗಿಟಗೆ. (My.).

ಅಗ್ಗಿಟಗೆ aggiṭige. = ಅಗಿಟಗೆ, ಅಗಿಟ್ಟಿಗೆ, ಅಗಿಷ್ಟಿಕೆ, ಅಗ್ಗಷ್ಟಿಗೆ, ಅಗ್ಗಿಟಿಕೆ, ಅಗ್ಗಿಷ್ಟಕೆ, ಅಗ್ಗಿಷ್ಟಿ, ಅಗ್ಗಿಷ್ಟಿಕೆ, ಅಗ್ಗಿಷ್ಟಿಗೆ. a potsherd used as a fire-pan or chafing dish, and also as a furnace (ಅಂಗಾರಧಾನಿಕೆ, ಅಂಗಾರಶಕಟಿ, ಹಸನ್ತಿ, ಹಸನಿ Nr.). the terms clearly appear to be Tbhs. of ಅಗ್ನಿ-ಇಷ್ಟಿಕೆ.

ಅಗ್ಗಿಣಿ aggiṇi. = ಅಗ್ಗವಣಿ, etc. [ದೀಕ್ಷೆಯಿಲ್ಲದೆ ಹೋಗಿ ಭಕ್ತರಲ್ಲಿ ಅಗ್ಗಿಣಿಯ ಮುಕ್ಕುಳಿಸಿದಡೆ ಹಾದಿಗೊಂಡು ಹೋಗುವ ನಾಯಿ ಗಿಡದ ಮೇಲೆ ಉಚ್ಚೆಯ ಹೊಯ್ದಂತಾಯಿತ್ತು ಕಾಣಾ Cv. 115]. see Prv. s. ಶಿವಾರ್ಚನೆ.

ಅಗ್ಗಿಷ್ಟಕೆ aggiṣṭake. = ಅಗ್ಗಿಟಗೆ, etc. (Si. 308).

ಅಗ್ಗಿಷ್ಟಿ aggiṣṭi. = ಅಗ್ಗಿಷ್ಟಕೆ. (My.).

ಅಗ್ಗಿಷ್ಟಿಕೆ aggiṣṭike. = ಅಗ್ಗಿಷ್ಟಕೆ. (My.; ಕುಮ್ಪಟ Cb.).

ಅಗ್ಗಿಷ್ಟಿಗೆ aggiṣṭige. = ಅಗ್ಗಿಷ್ಟಕೆ, etc. (My.; Si. 308; ಅಂಗಾರಧಾನಿಕೆ, ಕುಪ್ಪಡಿಗೆ, ಹಸನಿ G.).

ಅಗ್ಗಿಸು aggisu. (fr. ಅೞ್ಗು). to cause to decay or to become lean (Bh. 3, 4, 22).

ಅಗ್ಗುೞಿ agguḷi. = ಅಗೞಿ, etc. (ಅರ್ಗಲೆ, ಪರಿಘ Hlā.).

***ಅಗ್ಘವಣಿ agghavaṇi.** = ಅಗ್ಗವಣಿ. ಹೊತ್ತಾಱೆ ಎದ್ದು ಅಗ್ಘವಣಿಪತ್ರೆಯ ತಂದು ಹೊತ್ತುಹೋಗದ ಮುನ್ನ ಪೂಜಿಸು ಲಿಂಗವ. Bv. 172. Tbh. of ಅರ್ಘ್ಯಪಾನೀಯ.

ಅಗ್ನಾಯಿ agnāyi. *Agni's wife.* 2, the trētā yuga or second age.

ಅಗ್ನಿ agni. = ಅಗ್ಗಿ, etc. *fire.* 2, *the god of fire,* Agni. 3, *the guardian of the south-east quarter.* 4, the sacrificial fire of 3 kinds: gārhapatya, āhavanīya, and dakṣiṇa. 5, the number 3 (Mr. 73, 364). 6, the digestive faculty. 7, bile. 8, gold. 9, the plant Plumbago zeylanica (ವ್ಯಾಲ, ಚಿತ್ರಕ, ಚಿತ್ರಮೂಲ Mr. 128). 10, the plant Semecarpus anacardium. 11, ನಿಮ್ಬೆಯ ಹಣ್ಣು (Cb.). 12, ಕೇಸರ (Cb.). 13, N. of a metrical foot (Ch.). —ಅಗ್ನಿಗಣ್ಣ. -ಕಣ್ಣ. Śiva (R.). —ಅಗ್ನಿಗೆಯ್ಯ. -ಕೆಯ್ಯ. Bāṇāsura (R.). —ಅಗ್ನಿಮೂಲೆ. the south-east quarter (My.).

ಅಗ್ನಿಕಣ agni-kaṇa. *a spark* (ಕಿಡಿ Śm. 12).

ಅಗ್ನಿಕಾರ್ಯ agni-kārya. kindling or feeding the sacrificial fire with clarified butter, etc. (My.).

ಅಗ್ನಿಕಾಷ್ಠ agni-kāṣṭha. wood fit for kindling fire (My.). 2, Agallochum.

ಅಗ್ನಿಕುಣ್ಡ agni-kuṇḍa. a hole for the consecrated fire, or for any fire (My.).

ಅಗ್ನಿಕೋಣ agni-kōṇa. Agni's quarter, the south-east. (R.).

ಅಗ್ನಿಚಿತ್ agni-cit. *one who has arranged a sacrificial fire-place.*

ಅಗ್ನಿಚಿತ್ತು agni-cittu. Tbh. of ಅಗ್ನಿಚಿತ್ (Śmd. 196 Cm.).

ಅಗ್ನಿಜ್ವಾಲೆ agni-jvāle. glow or flame of fire. 2, *a plant with red blossoms, used by dyers, Grislea tomentosa* Roxb. (= ಧಾತಕಿ, ಸುಭಿಕ್ಷೆ). 3, another plant with red blossoms, Jalapippali.

ಅಗ್ನಿತಾರೆ agni-tāre. = ಅಗ್ನಿದೇವೆ. (My.).

ಅಗ್ನಿದೀಪನ agni-dīpana. stimulating digestion. (My.).

ಅಗ್ನಿದೇವೆ agni-dēve. the third lunar mansion, the Pleiades.

ಅಗ್ನಿನಯನ agni-nayana. he who has an eye of fire, Śiva. (My.).

ಅಗ್ನಿನೇತ್ರ agni-nētra. = ಅಗ್ನಿನಯನ. (My.).

ಅಗ್ನಿಪಟೂಕರಣ agni-paṭūkaraṇa. causing to burn with flame. see ಪೊತ್ತು.

ಅಗ್ನಿಫಲ agni-phala. a diamomd (ವಜ್ರ. Mr. 101).

ಅಗ್ನಿಬಳ್ಳಿ agni-baḷḷi. smooth-leaved heart-pea, Cardiospermum halicababum Lin. (St. & Pl.).

ಅಗ್ನಿಬಾಣ agni-bāṇa. a fiery arrow; a rocket. (My.).

ಅಗ್ನಿಬಾಧ agni-bādha. annoying or damaging with fire. see ಉರಿಪು.

ಅಗ್ನಿಬಾಧನ agni-bādhana. = ಅಗ್ನಿಬಾಧ. see ತಗುಳ್ಚು.

ಅಗ್ನಿಭೂ agni-bhū. born of fire. 2, *Shaṇmukha or Skanda,* Śiva's son.

ಅಗ್ನಿಮಥನ agni-mathana. = ಅಗ್ನಿಮನ್ಥ No. 1. (My.).

ಅಗ್ನಿಮನ್ಥ agni-mantha. production of fire by friction. 2, *the tree Premna spinosa,* the wood of which produces fire by attrition (= ಜಯ, ಶ್ರೀಪರ್ಣ). see ನಱುವಲ್.

ಅಗ್ನಿಮಾನ್ದ್ಯ agni-māndya. languor of the digestive power. (My.).

ಅಗ್ನಿಮಿತ್ರ agni-mitra. the fire's friend; N. of a prince (Śmd 9,0); the wind.

ಅಗ್ನಿಮುಖ agni-mukha. = ಅಗ್ಗಿಮೊಗ. a deity; —Brahmā.

ಅಗ್ನಿಮುಖಿ agni-mukhi. *the marking-nut, Semecarpus anacardium* Lin.

ಅಗ್ನಿರಕ್ಷಣೆ agni-rakṣaṇe. preservation of the sacred (especially of the domestic) fire. (My.).

ಅಗ್ನಿವರ್ಣ agni-varṇa. N. of a prince (Rām. 1, 5, 6).

ಅಗ್ನಿವೀರ್ಯ agni-vīrya. Rudra (Mr. 11).

ಅಗ್ನಿಶಿಖ agni-śikha. having a crest of fire. 2, *saffron, Crocus sativus.* 3, safflower plant, Carthamus tinctorius. 4, a lamp. 5, a rocket. 6, an arrow. 7, gold.

ಅಗ್ನಿಶಿಖೆ agni-śikhe. a flame. 2, *the plant Gloriosa superba* Lin. (Methonica superba Lam.; see ತರಿಗೊಟ್ಟು). 3, *the medicinal plant Menispermum cordifolium* Willd.

ಅಗ್ನಿಷ್ಟೋಮ agni-stōma. praise of Agni. 2, a protracted sacrifice, extending over several days in spring. (My.).

ಅಗ್ನಿಸಂಸ್ಕಾರ agni-saṁskāra. the consecration of fire, 2, performance of any rite in which the application of fire is essential, as the burning of the dead body (My.; B. 4, 215).

ಅಗ್ನಿಸಖ agni-sakha. *the wind.*

ಅಗ್ನಿಸಾಕ್ಷಿಕ agni-sākṣika. taking Agni for a witness (Si. 183). *Cf.* Nr. s. ಮದುವೆ.

ಅಗ್ನಿಸ್ತಮ್ಭನ agni-stambhana. the (magical) quenching of fire. (My.).

ಅಗ್ನಿಹೋತ್ರ agni-hōtra. an oblation to Agni (Si. 238). 2, the sacred fire. (Sk; Si. 24).

ಅಗ್ನಿಹೋತ್ರಿ agni-hōtri. practising the agni-hōtra. (My.). 2, maintaining the sacrificial fire. 3, one who has prepared the sacrificial fireplace, or conveyed the sacrificial fire to it.

ಅಗ್ನೀಧ್ರ agni-idhra. *the priest who kindles the fire.*

ಅಗ್ನ್ಯುತ್ಪಾತ agni-utpāta. a fiery portent, *a meteor, a comet.*

ಅಗ್ರ agra. soreness of the tongue and mouth, the thrush (C.; T. ಅಡ್ಡರ; Mhr. ಅಗರು).

ಅಗ್ರ agra. = ಅಗ್ಗ 2. *a top, point, summit,* or *surface* (ತುದಿ Nn. 82; ಲಲಾಮ 26; ತುದಿ Mr. 516). 2, *the front, fore part* (ಇದಿರ್ Nn. 82; Mr. 516). 3, the beginning (ಮೊದಲ್ Nn. 82; Mr. 516); an undertaking (ವಿಧಾನ 82, one Ms. ಮಾಟ). 4, the place near a town (ನಗರೋಪಭಾಗ, ಪಟ್ಟಣಸಮೀಪ Nn. 82). 5, *prominent, excellent, best, chief; the best part* (ಪ್ರಧಾನ, ಮುಖ್ಯ Nn. 82: ಅತಿಮುಖ್ಯ Mr. 516). 6, *excess.* 7, praise (ಸ್ತುತಿ, ಸ್ತೋತ್ರ 82). 8, a measure of food given as alms. 9, a multitude. 10, a weight equal to one pala. 11, prior, first. 12, goal, aim, resting place. see ಕೊನೆ, ಮುನ್ದು.

ಅಗ್ರಗ agra-ga. (= ಅಗ್ಗಗ). a leader.

ಅಗ್ರಗಣ್ಯ agra-gaṇya. that should be regarded as the foremost, principal, best (Bp. 52, 2; 54, 86).

ಅಗ್ರಗಮನ agra-gamana. going before, preceding. see ನೋಳ್, ಮುಂಚು.

ಅಗ್ರಗಾಮಿ agra-gāmi. = ಅಗ್ರೇಸರ. (My.).

ಅಗ್ರಜ agra-ja. first-born. 2, *an elder brother* (ಮೂಲಿಕ, ತನ್ನಿನ್ದವೂ ಹಿರಿಯನು Nn. 44). 3, a Brāhmaṇa (Bp. 57, 38. 69). 4, Viṣṇu.

ಅಗ್ರಜನ್ಮ agra-janma. = ಅಗ್ರಜ No. 1. 2, = ಅಗ್ರಜ No. 2. 3, *a Brāhmaṇa.* 4, Brahmā.

ಅಗ್ರಜಾತೆ agra-jāte. an elder sister (Mr. 313).

ಅಗ್ರಜೆ agra-je. ಅಗ್ರಜಾ. = ಅಗ್ರಜಾತೆ. (Bp. 42, 27). 2, Pārvatī (see ಅಗ್ರಜೇಶ).

ಅಗ್ರಜೇಶ agrajā-īśa. Śiva (Bp. 54, 43).

ಅಗ್ರಣಿ agraṇi. *foremost, best, excellent.*

ಅಗ್ರತಃ agra-taḥ. ಅಗ್ರತಸ್. *in front of, before.*

ಅಗ್ರತಃಕೃತ agrataḥ-krita. *placed in front.*

ಅಗ್ರತಃಸರ agrataḥ-sara. *going in front, taking the lead.*

ಅಗ್ರತನೂಜ agra-tanūja. an elder brother (Ch. v. 11. 14).

ಅಗ್ರತಾಮ್ಬೂಲ agra-tāmbūla. the first present of betel leaf, etc, made at an assembly (My.)

ಅಗ್ರತೆ agrate. the state of being prior, etc. see ಅನೇಕಾಗ್ರತೆ.

ಅಗ್ರಪೂಜೆ agra-pūje. the first or highest mark or act of reverence; the honours and attentions which at assemblies are rendered to the principal man present; the chief honours. (My.; Bh. 2, 10 sum.).

ಅಗ್ರಬಲ agra-bala. an advance-force, an avant-guard (ಮುನ್ದುಜೂಣಿ Bhn. 39).

ಅಗ್ರಮಾಂಸ agra-māṁsa. *the heart.* (ಬುಕ್ಕ Mr. 398). 2, morbid protuberance of the liver.

ಅಗ್ರಸಾಲೆ agra-sāle. the cooking hall of a temple (Mg.). ಅಗ್ರಸಾಲೇ ಊಟ, ಚನ್ದ್ರಸಾಲೇ ನಿದ್ರೆ (Prv.).

ಅಗ್ರಹಾರ agra-hāra. villages or land assigned to Brahmins for their maintenance (Bp. 2, 46; 56, 2; 57, 31, 57; B. 2, 52). ಅಗ್ರಹಾರಕ್ಕೆ ಹೋದರೂ ದುರಾಗ್ರಹ ಬಿಡಲಿಲ್ಲ (Prv.). see ಶ್ರೋತ್ರಿಯ-, ಸರ್ವಾಗ್ರಹಾರ.

ಅಗ್ರಹಾರಿಕ agra-hārika. a man belonging to an agrahāra. (My.).

ಅಗ್ರಾಮ್ಯ a-grāmya. not rustic.

ಅಗ್ರಾಮ್ಯವಚನವೃತ್ತಿ agrāmya-vacana-vṛitti. one of the *guṇas* in poetical composition (Kāvy. III, 1, A, 12).

ಅಗ್ರಾಮ್ಯತೆ a-grāmyate. the state of being not rustic or vulgar (Kāvy. III, 1).

ಅಗ್ರಾಹ್ಯ a-grāhya. not proper to be received or accepted; inadmissible. (My.). 2, impossible to be perceived (My.).

ಅಗ್ರಿಮ agrima. *foremost, prior.* 2, *principal, best.* 3, elder, eldest.

ಅಗ್ರಿಯ agriya. *foremost, principal, best.* 2, *an elder brother.*

ಅಗ್ರೀಯ agrīya. *principal, best.* 2, *pertaining to the point.* 3, an elder brother (ಹಿರಿಯ ಅಣ್ಣ G.).

ಅಗ್ರೇ agrē. in front; before; at the head; first.

ಅಗ್ರೇದಿಧಿಷು agrē-didhiṣu. *a man belonging to one of the first three classes, who at his first marriage takes a wife that was married before.* 2, a married woman whose elder sister is still unmarried.

ಅಗ್ರೇಶ್ವರ agra-īśvara. the supreme lord (Bp. 1, 61).

ಅಗ್ರೇಸರ agrē-sara. *going in front, preceding.* 2, a leader. 3, *best, excellent.*

ಅಗ್ರೋದಕ agra-udaka. water only to be used for the worship of an idol (My.; J. 9, 27).

ಅಗ್ರ್ಯ agrya. *foremost, prior.* 2, *principal, best, excellent.* 3, intent, closely attentive.

ಅಘ agha. *sin, crime* (ದುರಿತ ಪಾಪ Nn. 115; ದುರಿತ Mr. 515). 2, *pain, suffering* (ದುಃಖ 115; 515). 3, *passion* (ವ್ಯಸನ, ಸಪ್ತವ್ಯಸನ 115; ವ್ಯಸನಕಾರ್ಯ 515). 4, transmigration (ಭವಾನ್ತರ, ಭವಭವಾನ್ತರ 115; ಭವಮಾಲೆ 515). — ಅಘಪಡು. -ಪಡು. to suffer pain (Abh. P. 13, 148).

ಅಘಟನ a-ghaṭana. not happening; difficult to be accomplished; difficult; impossible; — what is not happening, etc. (My., also ಅಘಟನೆ, -ನಾ).

ಅಘಟಿತ a-ghaṭita. not happened; not effected; difficult to be obtained (J. 9, 5); improbable, unlikely; impossible (J. 20 sum.; My; Mhr.). 2, any wonder or marvel (Mhr.)

ಅಘನ a-ghana. not dense or solid, *liquid.*

ಅಘಮರ್ಷಣ agha-marṣaṇa. expiatory. 2, *a daily expiatory prayer,* reciting mentally a particular passage from the vēdas, while a little water, in the palm of the right hand, is held to the nose. 3, N. of the author of that prayer, the son of Madhucchandas.

ಅಘರಿಪು agha-ripu. Kṛiṣṇa (J. 32, 55).

ಅಘಾಟ aghāṭa. a wonder, a marvel; excess, abundance (Bh. 3, 8, 17; Mhr. ಅಘಟಿತ).

ಅಘಾತಿ aghāti. that which is not fatal, not injurious, or harmless (Abh. P. 2, 56).

ಅಘಾರಿ agha-ari. an enemy of sin (Bp. 23, 41).

ಅಘೋರ a-ghōra. not terrific. 2, a *euphemistic* title of Śiva, who really is ghōra, *the terrible.* 3, terrible, formidable (My.; Mhr.). 4, a form of Śiva (Bp. 68, 18).

ಅಘ್ನ್ಯೆ a-ghnye. improper to be killed (fem.). 2, *a cow.*

ಅಂ-, ಅಱ್-. aṅ. [=ಅಗ- inside, inner. @ here Kittel had mistaken ಅಂ etc. to be an equivalent of ಅಡಿ; 2, ಅಂ does not mean foot, bottom, sole. It is evidently the form taken by ಅಗ- in compounds such as ಅಗಂ+ಕಾಲ್ = ಅಂಗಾಲ್ etc.]. (T. & M. ಅಗಂ; Te. ಅರ, ಅರಿ; Tu. ಅಂ). —ಅಂಗಾಲ್. -ಕಾಲ್. the sole of the foot (Śmd. 199; ಚರಣತಲ Mr. 332.). ಒನ್ದು ದಸಿ ಅಂಗಾಲ ನೆಟ್ಟೊಡೆ (Bp. 43, 84). —ಅಂಗಾಲು. -ಕಾಲು. = ಅಂಗಾಲ್. ನಿನ್ನ ಅಂಗಾಲು ದಸಿ ನಟ್ಟು, ನಿನಗೆ ನಡೆಯಲು ಬಹುದೇ? (Bp. 44, 8; C.). ಅಂಗಾಲಿಗೆ ತ್ರಾಣವಿದ್ದರೆ ಬಂಗಾಳಕ್ಕೆ ಹೋಗಬಹುದು (Prv.). —ಅಂಗಾಲುಗೆರೆ. a line or wrinkle on the sole of the foot (ರೇಖೆ Mr. 332). —ಅಂಗೆಯ್. -ಕೆಯ್. the palm of the hand (Śmd. 199; ಪಾಣಿತಲ Mr. 322; C.). ಅಂಗೆಯ್ಯಲಿ ಅಡಗುವುದೆ? (Bp. 54, 11; see also 32, 32). ಅಂಗೆಯ್ಯ ಕೆಸಱಂ ತೋಱುತಂ (10, 8). ಕುಂಚಿತಾಂಗುಲಿಗಳನ್ ಉಳ್ಳ ಅಂಗೆಯ್ (ಪ್ರಸೃತಿ Nr.). ನಿಗುರಿದ ಬೆರಳುಗಳುಳ್ಳ ಅಂಗೆಯ್ (ಚಪೇಟ Nr.). ಚಾಚಲ್ ಪಟ್ಟ ಬೆರಳುಗಳುಳ್ಳ ಅಂಗೆಯ್ (ಚಪೇಟ Si. 212). ನನ್ನ ಅಂಗೆಯ್ ಜುವ್ ಅನ್ನುತ್ತದೆ (B. 1, 22). ಅಂಗೆಯ್ಯ ಹುಣ್ಣಿಗೆ ಕನ್ನಡಿ ಯಾಕೆ? —ಅಂಗೆಯ್ ತೋಱಿಸಿ ಅವಲಕ್ಷಣ ಅನ್ನಿಸಿ ಕೊಣ್ಡ ಹಾಗೆ. —ಆಕಾಶ ಹಱಿದು ಬೀಳುವಾಗ್ಗೆ ಅಂಗೆಯ್ ಒಡ್ಡಿದರೆ ನಿನ್ತೀತೇ? (Prvs.). —ಅಂಗೆಯ್ಗೆರೆ. a line on the palm of the hand (C.). —ಅಂಗೆಯ್ಬೆರಲ್. -ಬೆರಲ್. a finger of the hand. ಅಂಗೆಯ್ಬೆರಲ್ ಕಾಲ್ ಕಡಿವೆತ್ತನ್ತೆ ಅಗೆ ತಳ್ತ ಅಯ್ಗಲ್ (Rśv. 9, 22). —ಅಂಗೈ. -ಕೈ. = ಅಂಗೆಯ್.

ಅಂಕ aṅka. = ಅಂಕೆ. one of the tatsamas (Śmd. 384; Ct. 11, 48; Kk. 95; Śm. 76). a hook. 2, a curve or bend. 3, *the curve in the human figure above the hip,* where infants are carried (hence often equivalent to *the lap*). 4, the thigh (ತೊಡೆ Nn. 131; Si. 404; G., Mhr.). 5, the side or flank. 6, the body (ಶರೀರ Cb.). 7, any hook or crooked instrument. 8, a line, a stroke. 9, a numerical figure, cipher (ಸಂಖೆ Mr. 527; Ch. v. 343). 10, *a mark, a sign;* a mark branded on an animal, etc. [ತನ್ನಂಕದೊಂದುಗ್ರ ಸಾಯಕದಿಂ ನಾಯಕರಂ ಪಡಲ್ವಡಿಸುತುಂ Pb. 1, 74]. (ಕುಱುಪು Ct. I, 48; ದೋಷ, ಕುಱುಹು Nn. 15; ಸಾಧನ, ಕುಱುಹು Nn. 114). 11, anything bright or coloured (ಚಿತ್ರ Nn. 131; Mr. 522). 12, a ray (ರುಕ್, ಕಿರಣ 131). 13. ornament, decoration (ಅಲಂಕಾರ, ಶೃಂಗಾರ 131; ಅಲಂಕಾರ, 522). 14, a spot, fault, offence (ಕಲಂಕ 131; 522). 15, a heavy burden (ಅತುಲಧುರ 522); affliction, distress (ಸನ್ತಾಪ, Mr. 527). 16, the sounds of bells and of small and large drums (ಮುರಜ-ಘಣ್ಟ-ಡವುಡೆ -ನುಡಿಗಳ್ 527). 17, fight, war [ಅಲುತ್ತಲು ಹಱಿಯ ಹೊಯಿಸಿ ಅಂಕವಮಾಡಿದೆನೆಲ್ಲರ ಕಂಡು! Bv. 436; Cv. 142]. (ಸಂಗ್ರಾಮ, ಕಾಳಗ 131; see Bp. 10, 51; 34, 24; J. 14, 1; 18, 6; 22, 28). 18, proximity, vicinity. 19, place, ground (T., M. ಅಗ). [20, a soldier ಅಂಕಕಳನೇಱಿ ಕೈಮುಱಿದಿರ್ದೊಡೆ ಮಾಱಂಕ ಬಂದಿಱುವುದ ಮಾಣ್ಬನೆ! Bv. 178]. —ಅಂಕಡೊಂಕು. dupl. excessive crookedness (Tu., My.). ಅಂಕಡೊಂಕ ಸಂಕಪಾಲ ಮೂಱು ತಲೆಗೆ ಹತ್ತು ಕಾಲು (My. riddle). —ಅಂಕದೇವಯ್ಯ N. (Bp. 58, 8). —ಅಂಕದೌಷಧ. the drug of war, gunpowder (? ಬಳಮರ್ದ Śmd. II; Śm. 39; ಬಳವರ್ದ Kk. 84).

ಅಂಕಕಾಱ aṅka-kāṟa. an influential or a chief servant; a leading hero [ಗಂಡಮುಚ್ಚರದ ಮೆಚ್ಚುವಣೆಗೆಯಂಕಕಾಱರ್ಕ್ಕತುಳಕ್ಕೆಯ್ಯಿಂ

ಸೂಟೀಱಱಱವಂತೆ Pb. 12, 76 va; Bv. 700]. (Bp. 9, 32, 39; 16, 18; 23, 25; 52, 38; Te. ಅಂಕಕಾಡು = ಮೊನೆಕಾಡು. a leader.)

ಅಂಕಕಾರ್ತಿ aṅka-kārti. a female aṅkakāra (Bp. 12, 6, 40).

ಅಂಕಗಣಿತ aṅka-gaṇita. arithmetic (B. 5, 216; Mhr.; My.).

***ಅಂಕಚಾರಣೆ aṅka-cāraṇe.** praise by panegyrists ಅಂತಧಿಕ ವಿಶೇಷಣ ಗಣಮುಂ ತಡೆಯದೆ ಪೇೞ್ವೊಡಂಕಚಾರಣೆಗಳೊಳಂ ಸಂತಂ ಪೇೞ್ಗ Kr. 2, 29.

ಅಂಕಣ aṅkaṇa. the (small or large) space either between any two posts or pillars in a wall that support the roof, or between any two beams (C.; T.; Tu.). 2, = ಅಂಗಣ Ct. II, 57). 3, a place. (ಸ್ಥಳ, ತಾವು G.). ಆ ಪತ್ರವು ಒನ್ದು ಅಂಕಣದಷ್ಟು ಇರುತ್ತದೆ (B 4, 103). ಅಂಕಣದ ಮನೆ ಆದರೆ ಕೊಂಕಣಿಗನಿಗೆ ಆಗದೆ? (Prv.). —ಅಂಕಣದಾಯ. -ಅಯ. the measure of an aṅkaṇa (My.): 2, -ದಾಯ, a line of aṅkaṇas (My.).

ಅಂಕತ್ರಿಣೇತ್ರ aṅka-triṇētra. an allowed arisamāsa (Śmd. 207): the well-known Śiva.

ಅಂಕದುವರ aṅka-duvara. a spacious door (Bp. 16, 9). [ಅಂಕ+ದ್ವಾರ].

ಅಂಕನ aṅkana. marking, stamping, branding, ciphering. 2, = ಅಂಗಣ, which is its Tbh. (Śmd. 364, one MS. ಅಂಗನ).

ಅಂಕಪಾಲಿ aṅka-pāli. embracing, an embrace. (R.).

ಅಂಕಪಾಲಿಕೆ aṅka-pālike = ಅಂಕಪಾಲಿ. (R.).

ಅಂಕಪೀಠ aṅka-pīṭha. the thigh regarded as a seat (Śsv. 1, 76).

ಅಂಕಲಿ aṅkali. = ಅಂಕೋಲೆ, etc. (My.). —ಅಂಕಲಿ ಗಿಡ, = ಅಂಕೋಲೆಯ ಮರ. (Z.; My.).

ಅಂಕಮಾಲೆ aṅka-māle. a list of titles. ಅಂಕಮಾಲೆಯನ್ ಓದುವವನ್ ಉದ್ಘಟನು (Bp. 9, 44).

ಅಂಕಮಣಿ aṅka-maṇi. a decorated stool or seat; [a saddle. ಅನ್ನೆಗಂ ನಕುಳನುಮಂಕಮಣಿಯುಂ ಬಾಳುಂ ಬಾರುಂ ಚಮ್ಮಟಿಗೆಯುಮನೊರ್ವ ಕೀೞಾಳಿಂ ಪಿಡಿಯಿಸಿಕೊಂಡು ಬಂದು Pb. 8, 54 va. aṅka + maṇe ?]. (Abh. P. 4, 120). ಮುರದೊಳ್ ಸಮೆದ ಅಂಕಮಣಿಯನ್ ಏಱಿದಂ (Śmd, 288).

ಅಂಕಪಱೆ aṅka-paṟe. (Śmd. 386; Kk. 97). a war-drum.

ಅಂಕಮಾತು aṅka-mātu. (Śmd. 386; Kk. 97). a beautiful word, etc.; a cipher-word.

ಅಂಕವೀರ aṅka-vīra. a battle-hero, a valiant man. (Kk. 11*a*).

ಅಂಕಿತ aṅkita. marked (ಗುರ್ತಾದ G.); numbered; — a mark or sign; a signature (My.). 2, a word (ಶಬ್ದ Nn. 9. 22. 36. 61). 3, a dedication (of a work, My.; Te.). 4, in one's own power or subjection (ಸ್ವಾಧೀನ Cb.). see ಲೋಚನಾಂಕಿತ; J. 18, 6.

ಅಂಕಿತನಾಮ aṅkita-nāma. a proper name or noun (Śmd. 93. 94. 95).

ಅಂಕಿಸು aṅkisu. to mark (v. t.), to regard, to look at, to pay attention to. ನನ್ದಿಕೇಶನನ್ ಅಂಕಿಸುತೆ ಕೀರ್ತಿಸಿದರ್ ಅೞ್ತಿಯೊಳು (Bp. 2, 26; see also Bp. 4, 8. 14. 36; 12, 57; 15, 14; 21, 41; 26, 6; 30, 29; 32, 27; 38, 39; 53, 29).

ಅಂಕುರ aṅkura. *a sprout, a shoot* (ಅಗೆ, ಮೊಳೆ Kk. 23). 2, hair (ಮೈಮೇಲಿನ ಕೂದಲು Cb.). 3, blood (ರಕ್ತ Cb.). 4, water (ನೀರು Cb.). 5, a point (ತುದಿ Cb.). 6, a tumour.

ಅಂಕುರಿತ aṅkurita. sprouted, broken forth, arisen. see Bp. 2, 57; 35, 31; 36, 49; 39, 51; 53, 55.

ಅಂಕುರಿಸು aṅkurisu. to sprout; to rise, to arise; to occur, to happen (Śmd. 270; Bp. 1, 11; 25, 2; 32, 11; 44, 26; 49, 24; 50, 78; 51, 7; 56, 12; J. 1, 3; 5, 58; 11, 14; 12, 6). [to effect horripulation. ವೀರಲತಾಂಗಿಯ ಸೋಂಕು ಮೆಯ್ಯೊಳಂಕುರಿಸೆ ನಿರಾಕುಳಂ ಕಳಿದ ನಾಜಿ ಪರಿಶ್ರಮುಮಂ ಗುಣಾರ್ಣವಂ Pb. 11, 155].

ಅಂಕುಶ aṅkuśa. ಅಂಕುಸ, ಅಂಗುಸ. *a hook* especially *an elephant-driver's hook.* 2, a certain feat of wrestlers (Cpr. 5, 77).

ಅಂಕುಶಚಾರಣ aṅkuśa-cāraṇa. = ಅಂಕುಸಸಾರಣೆ. guiding or driving (an elephant) with a hook (ಯಾತ Hlā.).

ಅಂಕುಸ aṅkusa. Tbh. of ಅಂಕುಶ [ಅರಂಕುಸವಿಟ್ಟೊಡಂ ನೆನೆವುದೆನ್ನ ಮನಂ ವನವಾಸಿ ದೇಶಮುಂ Pb. 4, 30]. (Śmd. 335. 357. 372).

ಅಂಕುಸಸಾರಣೆ aṅkusa-sāraṇe. Tbh. of ಅಂಕುಶಚಾರಣ (Śmd. 376).

ಅಂಕೂರ aṅkūra. = ಅಂಕುರ. *a sprout, a shoot* (ಮೊಳೆ Mr. 106).

ಅಂಕೆ aṅke. 1. an order; a command, (ಆಜ್ಞೆ Śm. 80; ಅಪ್ಪಣೆ G., Te. ಆಕೆ; J. 8, 13). authority; control; restraint; check (C.; ಅಧಿಕಾರ Cb.). [ನಿಮ್ಮ ಅಂಕೆಗೆ ಝುಂಕೆಗೆ ಶಂಕಿತನಾದರೆ ಎನ್ನ ಹಾನಿ ಕೂಡಲ ಸಂಗಮ ದೇವಾ. Bv. 700]. ಅವನು ಅಂಕುಶದಿನ್ದ ಆನೆಯನ್ನು ತನ್ನ ಅಂಕೆಯೊಳಗೆ ಇಟ್ಟುಕೊಳ್ಳುತ್ತಾನೆ. (B 4, 24). (ಅನಿಲಜಂ) ಇನ್ದ್ರಜಿತುವಿನ ಬ್ರಹ್ಮಾಸ್ತ್ರದ ಅಂಕೆಯೊಳ್ ನಿನ್ದು, ಬಾಲಧಿಗೆ ಇಕ್ಕಿದ ಉರಿಯಿನ್ದ ಲಂಕೆಯಂ ಸುಟ್ಟು (J. 18, 6). ಅರಸನ ಅಂಕೆ ಇಲ್ಲ, ದೈವದ ಕಾಟವಿಲ್ಲ. — ಅಂಕೆಯಿಲ್ಲದ ಕಪಿ ಲಂಕೆ ಸುಟ್ಟಿತು (Prvs.).

ಅಂಕೆ aṅke. 2 (= ಆನಿಕೆ) leaning against, reclining on; a staff given for support (ಆನಿಕೆ, ಆಧಾರಕ್ಕೆ ಕೊಟ್ಟ ಕೋಲು G.; *cf.* ಅಡೆ 8). 2, a lever (R.; ಸೂನ್ನೆಯ ಕೋಲು G.). 3, trust, faith (ಅಡರ್ಪು, ನೆಮ್ಮುಗೆ Śm. 66, 80; Kk. 84; ವಿಶ್ವಾಸ Cb.; *cf.* ಅಡೆ 6).

ಅಂಕೆ aṅke. Tbh. of ಅಂಕ. a numerical figure; an account (ಸಂಖ್ಯೆ, ಲೆಕ್ಕ Mr. 349). ಅಂಕೆ ತಿಳಿಯದವ ಮುಂಕಗಿನ್ತ ಕಡೆ (Prv.).

ಅಂಕೆಗ aṅkega. one who is marked. see ಮಿಗದ ಅಂಕೆಗ.

ಅಂಕೋಠ aṅkōṭha. = ಅಂಕಲಿ, ಅಂಕೋಲ, ಅಂಕೋಲು, ಅಂಕೋಲೆ. *the plant Alangium hexapetalum.*

ಅಂಕೋಣಿ aṅkōṇi. = ಅಂಗವಡಿ (My.).

ಅಂಕೋಲ aṅkōla. = ಅಂಕೋಠ (My.). see ಅಂಕೋಲೆ.

ಅಂಕೋಲು aṅkōlu. = ಅಂಕೋಲ ((My.).

ಅಂಕೋಲೆ aṅkōle. = ಅಂಕೋಲ, etc. see ಮುಳ್ಳಂಕೋಲೆ. — ಅಂಕೋಲೆ ಗಿಡ. = ಅಂಕೋಲೆಯ ಮರ. (Si. 127). —ಅಂಕೋಲೆಯ ಮರ. = ಅಂಕೋಠ, (ಅಂಕೋಲ, ನಿಕೋಚಕ Nr.). a shrub or small tree, Alangium lamarckii, thwaites (St. & Pl.).

ಅಂಕ್ಯ aṅkya. fit to be marked or counted. 2, *a small oblong drum.*

ಅಂಗ aṅga. way, manner, mode. ಎಲ್ಲಂಗಂ, in every way (Śmd. 130. 208). ಇವನ್ ಎನ್ನ ಮಗನ್ ಒನ್ದು ಅಂಗದಿಂ (Bp. 3, 28). ಆವ ಅಂಗದಿಂ? (9, 10; 24, 64). ನದಿಗಳ್ ಅರಳೆಯ ಹಾಸು, ನವವಿಷಮ್ ಉದರದೀಪನಚೂರ್ಣಮ್ ಆವ ಅಂಗದಲಿ ಸಾಪತ್ನರಲಿ ಸದರವ ಕಾಣೆ (Bh. 1, 8, 6). ರಾಜ್ಯವ ಕೊಡುವುದು ಆವ ಅಂಗದಲಿ? (1, 8, 23). see ಪಲವಂಗ, ಹಲವಂಗ; and *cf.* ಅನ್ದ.

ಅಂಗ aṅga. 1. *a limb, a member.* 2, *a division or part of a whole.* 3, a supplementary science, especially the six vēdāṅgas (q. v.). 4, a verse-line (Ch.). 5, the base of a word. 6, *the body.* 7, the whole of the subordinate characters in a play. 8, the mind (ಮನಸು G.). 9, an expedient, a means of success. 10, N. of Bengal proper; the king of Anga (Rśv. 5, 21). 11, having members or divisions; contiguous, adjacent, near. —ಅಂಗದಟ್ಟಿ. a petticoat, a slip worn under a muslin gown (Te.; R.). —ಅಂಗದಟ್ಟು. tying the dōtra in a peculiar way to the body, as liṅgavanta viraktas do (S. Mhr.). —ಅಂಗಮುಡಿಗೆ. -ತುಡಿಗೆ. clothes or orna-

ments for the body (R.). —ಅಂಗಮಿಲ್ಲದ. -ಇಲ್ಲದ. Kāma (J. 11, 16). —ಅಂಗರಕ್ಕೆ. a body-guard man (Abh. P. 13, 78). —ಅಂಗ ರಕ್ಕೆ. a body-guard (Abh. P. 14, 37). —ಅಂಗವಟ್ಟ. -ಬಟ್ಟ. roundness of limb; beauty (Rām 28, 7).

ಅಂಗ aṅga. 2. *a vocative particle:* well; indeed; true; please; rather; quick.

ಅಂಗಗುಣಾತ್ಮಕ aṅga-guṇa-ātmaka. having the qualities of the body (Bp. 51, 30).

ಅಂಗಂಗಡಿ aṅgaṅgaḍi. see s. ಅಂಗಡಿ.

ಅಂಗಂಗಲ aṅgaṅgala. see s. ಅಂಗಲ.

ಅಂಗಚಿತ್ತ aṅga-citta. the object in view, the heart's wish (Bh. 3, 13, 19).

ಅಂಗಚೇಷ್ಟೆ aṅga-ceṣṭe. gestures of the body, grimaces. ಮಂಗ ಚೇಷ್ಟೆ ಬಿಟ್ಟರೂ ಅಂಗಚೇಷ್ಟೆ ಬಿಡಲಿಲ್ಲ (Prv.).

ಅಂಗಜ aṅga-ja. produced from or on the body. 2, the hair of the head (ರೋಮ, ಕೂದಲು Nn. 53). 3, a son (ಆತ್ಮಜ, ಮಗ 53). 4, love; passion (ಪ್ರೀತಿ Cb.). 5, *the god of love, Kāma* (ಕಾಮ, ಮದನ 53). 6, disease (ರೋಗ Cb.). 7, blood (ರುಧಿರ, ರಕ್ತ 53). 8, the five organs of sense (ಪಂಚೇಂದ್ರಿಯ 53). 9, water (ವಾರಿ, ಉದಕ 53).

ಅಂಗಜಜನಕ aṅgaja-janaka. the father of Kāma, Viṣṇu (My.).

ಅಂಗಜನ್ಮ aṅga-janma. = ಅಂಗಜ. Kāma.

ಅಂಗಜನ್ಮಾಂತಕ aṅgajanma-antaka. the destroyer of Kāma, Śiva. 2, sign for a long letter (Ch.).

ಅಂಗಜವೈರಿ aṅgaja-vairi. the foe of Kāma, Śiva (ಪರಮೇಶ್ವರ, ಈಶ್ವರ Nn. 143).

ಅಂಗಜಾತ aṅga-jāta. = ಅಂಗಜ. Kāma (Bp. 4, 17; 28, 59).

ಅಂಗಜಾಂತಕ aṅgaja-antaka. = ಅಂಗಜನ್ಮಾಂತಕ. (Bp. 36, 61; 56, 4).

ಅಂಗಜಾರಿ aṅgaja-ari. = ಅಂಗಜವೈರಿ. (My.).

ಅಂಗಡಿ aṅgaḍi. a shop, a stall (C.; ಆಪಣ, ಹಟ್ಟ Nr.; Si. ಪಣ್ಯವಿಕ್ರಯಶಾಲೆ, ಆಪಣ, ವಿಪಣಿ Hlā.; ಪಣ್ಯ, ವಿಪಣಿ Mr. 195; J. 6, 13; Tu., T. ಅಂಗಾಡಿ; M. ಅಙ್ಙಾಡಿ; Te. ಅಂಗಡಿ). ಮಾಜಿಲ್ ಬೀಡಿ ಅಂಗಡಿಯಲ್ಲಿ ಪಸರಿಸಿದ ದ್ರವ್ಯವು (ಕ್ರಯ್ಯ Nr.). ಜಲಚರನಿಚಯವನ್ ಒಯ್ದು, ಅಂಗಡಿಯೊಳಗೆ ಮಾಱಿ (Bp. 27, 21). ಅಂಗಡಿಯೊಳಗೆ ವಿಕ್ರಯಿಸಿ (30, 4). ಅಂಗಡಿಯೊಳ್ ಆಡುವ ನುಡಿಗಳ್ (54, 78; see also 32, 52; 42, 5). ಕಡ್ಡಾಯದ ಅಂಗಡಿಯಲಿ ಇದ್ದು ಫಲವೇನು ? (Dp. 148, 3). ದೇವರಿಲ್ಲದ ಗುಡಿಯು ಹಾಳು ಬಿದ್ದ ಅಂಗಡಿಯು (54, 1). ಅಂಗಡಿ ಮಾಱಿ ಗೊಂಗಡಿ ಹೊದ್ದ ಹಾಗೆ. —ಅಂಗಡಿಯಲ್ಲಿ ಚುಂಗಡಿ ಸಿಕ್ಕದೆ? (Prvs.). —ಅಂಗಂಗಡಿ. rep. = ಅಂಗಡಿ ಅಂಗಡಿ. (C.). —ಅಂಗಡಿಕೇರಿ. = ಅಂಗಡಿ ಬೀದಿ. (ವಿಪಣಿ Si. 420). —ಅಂಗಡಿಚೀಟಿ. a note to a shop-keeper (S. Mr.), —ಅಂಗಡಿಬೀದಿ. a market-street, a market (ವಿಪಣಿ Nr.; ನಿಗಮ Si. 442; ಹಟ್ಟ 490). —ಅಂಗಡಿಮನೆ. a house with a shop (Bp. 52, 11). —ಅಂಗಡಿಮಳಿಗೆ. a prolongation of the front roof of a shop, a sort of verandah in front of a shop (C.). —ಅಂಗಡಿ ಮೂಲಿಕೆ. a shop drug (C.). —ಅಂಗಡಿಯವ. -ಅವ. a shopkeeper (C.). —ಅಂಗಡಿವ್ಯಾಪಾರ. shop-trade. ಅಂಗಡಿವ್ಯಾಪಾರ ಒಸರುನೀರಿನ ಹಾಗೆ (Prv.). —ಅಂಗಡಿಸರಕು. the goods of a shop (C.). —ಅಂಗಡಿ ಸಾಲ. a shop-debt (C.). —ಅಂಗಡಿ ಹಚ್ಚು. to open a shop (My.). ಅಂಗಡೀ ಹಚ್ಚಿ ಇರುತ್ತಾರೆ (B. 3, 77). —ಅಂಗಡಿ ಹಾಕು. = ಅಂಗಡಿ ಹಚ್ಚು. (My.). ಅವನು ಕಾಗದ ಮಸಿ ಮುನ್ತಾದ ಒಡಿವೆಗಳ ಅಂಗಡಿಯನ್ನು ಹಾಕಿ (B. 5, 218). ಅಂಗಡೀ ಹಾಕುವದು (5, 273). 2, to shut a shop (C.). —ಅಂಗಡಿ ಹೂಡು. = ಅಂಗಡಿ ಹಾಕು. (My.).

ಅಂಗಡಿಕಾಱ aṅgaḍi-kāṟa. a shopkeeper (C.; B. 4, 178; 5, 282).

ಅಂಗಡಿಗಾಱ aṅgaḍi-gāṟa. = ಅಂಗಡಿಕಾಱ. (C.).

ಅಂಗಣ aṅgaṇa. = ಅಂಕಣ, ಅಂಗನ, ಅಂಗಳ. a Tbh. of ಅಂಕನ or ಅಂಗನ (Śmd. 364), and also one of the Tatsamas (Śmd. 384; Śm. 77; Kk. 95). a court, a yard, especially one in front of a house; an open space, an area (ಚತ್ವರ, ಅಜಿರ Nr.; ಅಜಿರ, ಪ್ರಾಂಗಣ, etc. Hlā.; ಪ್ರಾಂಗಣ, ಅಂಗಳ Nn. 117; ಅಂಗಳ, ಮನೆಯ ಮುನ್ನಿನ ಸ್ಥಳ G.; see ರೋದೋಂಗಣ). [Pb. 4, 10]. ಅಂಗಣದ ನಿಧಿ, ಅವರೆಯ ಜೇನ್, ಅಂಗಳದ ಸುಧೆ ಎನಲ್ ಎಸವ ಶಿವಸಂಗನಿಷ್ಠಾಭಕ್ತಿಪಥಂ (Bp. 60, 44). —ಅಂಗಣವಲಯ. (Śmd. 386; Kk. 97). the boundary or circumference of a yard. —ಅಂಗಣವಾವಿ. -ಬಾವಿ. (Śmd. 364, 386; Kk. 97). a well in a yard. —ಅಂಗಣವೆಟ್ಟು. -ಬೆಟ್ಟು. (? Śmd. 386, o. r. -ವೆಟ್ಟ; Kk. 97).

ಅಂಗತ aṅgata. = ಅಂಗತಕ್ಕಲು, ಅಂಗತ್ತ, ಅಂಗಾತ. flatways, on the back.

ಅಂಗತಕ್ಕಲು aṅgatakkalu. = ಅಂಗತ. (My.; also -ಲೆ).

ಅಂಗತ್ತ aṅgatta. = ಅಂಗತ. (My.).

ಅಂಗದ aṅgada. *a bracelet worn on the upper arm.* 2, N. of an ape, son of Vāli.

ಅಂಗನ aṅgana. = ಅಂಗಣ, ಅಂಗಳ. going, walking. 2, *a court, a yard, an area.*

ಅಂಗನಾಜೀವಿ aṅganā-jīvi. one who gets a livelihood by his wife. 2, a dancer. an actor (ಜಾಯಾಜೀವ Mr. 3[illegible]

ಅಂಗನಾರಜಸ್ aṅganā-rajas. *the menstrual* [illegible]

ಅಂಗನೆ aṅgane. ಅಂಗನಾ. *a woman with a beautiful body.* 2, *a woman, a female.* 3, *the female elephant of the north.*

ಅಂಗನ್ಯಾಸ aṅga-nyāsa. ceremony of touching certain parts of the body. (My.).

ಅಂಗಪ್ರತ್ಯಂಗ aṅga-pratyaṅga. the major and minor members of the body (Cpr. 3, 102 va.; 4, 88 va.).

ಅಂಗಪ್ರದಕ್ಷಿಣ aṅga-pradakṣiṇa. rolling the body to the right for a considerable distance round a temple. (R.).

ಅಂಗಭವ aṅga-bhava. = ಅಂಗಜ. Kāma.

ಅಂಗಭವಾಂಗನಾಶ aṅgabhava-aṅgā-nāśa. the destroyer of Kāma's body, Śiva (Bp. 18, 94).

ಅಂಗಭೇದ aṅga-bhēda. a certain limb of the body; any of its limbs (My.).

ಅಂಗಮಣಿ aṅgamaṇi. a present given in a girl's marriage, or in her first pregnancy after her marriage (T.; R.).

ಅಂಗಮರ್ದ aṅga-marda. *a man who has to shampoo the body of others.*

ಅಂಗಮರ್ದಿ aṅga-mardi. = ಅಂಗಮರ್ದ.

ಅಂಗಯ್ಸು aṅgaysu. = ಅಂಗವಿಸು. (J. 20, 29).

ಅಂಗರ aṅgara. Tbh. of ಅಂಗಾರ. (ಅಂಗಾರ Śm. 11; ಇಂಗಳ 113; ಅಂಗಾರ, ಬೂದಿ G.). — ಅಂಗರಗಡ್ಡೆ. = ಅಂಗಾರ-. (ಅಮಕಿರೆ St. & Pl.). —ಅಂಗರವೋಳಿಗೆ. -ಹೋಳಿಗೆ. Tbh. of ಅಂಗಾರಸ್ಫೋಟಿಕ (Ct. II, 57).

ಅಂಗರಕ್ಷ aṅga-rakṣa. a body-protector. 2, protection or preservation of the body. 3, a coat of mail (ಕವಚ, ಜಗರ, ಜೋಡು, etc. Mr. 292).

ಅಂಗರಕ್ಷಕ aṅga-rakṣaka. a body-guard (Bp. 59, 28).

ಅಂಗರಕ್ಷಣೆ aṅga-rakṣaṇe. protection or preservation of the body (My.).

ಅಂಗರಕ್ಷೆ aṅga-rakṣe. protection or preservation of the body (My.). 2, a body-guard (My.; ಮೆಯ್ಕಾವಲಿ, ಕಾವಲ G.). 3, an amulet or charm (My.). 4, a coat of mail (R.). ಅಂಗರಕ್ಷೆ ಇಲ್ಲದ ಮೇಲೆ ಬಂಗಾರ ಯಾಕೆ? (Prv.).

ಅಂಗರಣೆ aṅgaraṇe. = ಅಗರಣೆ, etc. (My.).

ಅಂಗರಾಗ aṅga-rāga. *different unguents used for perfuming the body.* 2, perfuming the body after bathing (ವಿಲೇಪನ, ಉದ್ವರ್ತ, ತೀವಿ ಪೂಸುವುದು Mr. 339).

ಅಂಗರಾಜ aṅga-rāja. Karṇa, the king of Aṅga. (My.).

ಅಂಗರುಹ aṅga-ruha. what grows on the body, as hair, wool, etc. (R.).

ಅಂಗರೇಖು aṅgarēkhu. a long coat (My.; H.).

ಅಂಗಲ್ aṅgal. = (ಅಂಟಿಲ್, ಅಂಯಲ್, *i. e.*) ಅಟಲ್ 1. — ಅಂಗಲಾಚಿಕೆ. -ಅಚಿಕೆ. crying from grief (My.). — ಅಂಗಲಾಚಿಸು. -ಅಚಿಸು. to cause to lament, etc. (My.). — ಅಂಗಲಾಚು. -ಅಚು. = ಅಂಗಲಾರ್ಚು. to cry from grief; to grieve or sorrow. 2, to request humbly (C.; T., M. ಅಂಗಲಾಯ್; Te. ಅಂಗಲಾರ್ಚು). ಅಂಗಲಾಚುತ್ತ ಅಟಲುವುದು (Bp. 36, 14). — ಅಂಗಲಾಪು. -ಅಪು. lamentation; grief (My.; Tu. greed; Te. ಅಂಗಲಾರ್ಪು; T. ಅಂಗಲಾಯ್ಪು). —ಅಂಗಲಾರ್ಚು. -ಅರ್ಚು. = ಅಂಗಲಾಚು. (My.).

ಅಂಗಲ aṅgala. = ಅಗಲ, etc. the state of being separate or more or less apart; the thinness of corn in a field, etc. (C.). — ಅಂಗಂಗಲ. rep. = ಅಂಗಂಗಲು. (C.).

ಅಂಗಲು aṅgalu. = ಅಂಗಲ, etc. (C.). (ಶಹಾಮೃಗದ) ಗೋಣಿನ ಮೇಲೆ ಬಿಜುಸುಗೂದಲು ಅಂಗಲಾಗಿ ಬೆಳೆದು ಇರುತ್ತದೆ (B. 4, 191). ಅಂಗಲಾಗಿ ಬಿತ್ತಿದ್ದು ಅಗಲವಾಗಿ ಏಟುವದು (Prv.). = ಅಂಗಂಗಲು. rep. (C.).

ಅಂಗಪಡಿ aṅga-paḍi. (?). = ಅಂಕೋಣೆ. a stirrup (T. ಅಂಗಬಡಿ, ಅಂಗವಡಿ; R.).

***ಅಂಗವಣಿ aṅgavaṇi.** = ಅಂಗವಣೆ. ಜಂಗಮ ನಿಂದೆಯ ಮಾಡಿ ಲಿಂಗವ ಪೂಜಿಸುವ ಭಕ್ತನ ಅಂಗವಣಿಯೆಂತೊ? Bv. 424.

ಅಂಗವಣೆ aṅgavaṇe. ability from practice, habitude; — force, vigour; prowess or power (Mhr. ಅಂಗವಣ; see Bp. 12, 9; Bh. 7, 18, 14; Rām. 31, 32; J. 11, 16; 26, 21).

ಅಂಗವಸ್ತ್ರ aṅga-vastra. = ಅಂಗೋಸ್ತ್ರ. a small cloth for wiping off one's perspiration, cleaning the nose and drying the body after bathing; it is either worn loosely over the shoulder or put into the pocket (S. Mhr.). 2, an upper garment, a dōtra (My.; ಉತ್ತರೀಯ Cb.; see s. ಪೊದ್ದು 1). ಅಂಗವಸ್ತ್ರ ಇಲ್ಲದಿದ್ದರೆ ಅಂಗಾರಕ ಇಡಬಾರದೆ? (Prv.). ಅಂಗಮೂರ್ತಿಗೆ ಮಜ್ಜನಕ್ಕೆ ಎಱದು, ಅಂಗವಸ್ತ್ರದಿನ್ ಒತ್ತಿ (Bp. 43, 30).

ಅಂಗವಿಕಾರ aṅga-vikāra. change of bodily appearance; collapse, bodily disease or disorder; fainting, apoplexy. (Bp. 59, 54).

ಅಂಗವಿಕ್ಷೇಪ aṅga-vikṣēpa. *gesticulation.* 2, a kind of dance (ಒನ್ದು ತರದ ಕುಣಿತ G.).

ಅಂಗವಿಸು aṅgavisu. ≐ ಅಂಗಯ್ಸು. to come together, to join, to meet, to crowd (v. i.); — to lay hold of, to seize; to concern one's self in (Mhr. ಅಂಗಾವಿಣೇಂ, to embrace). [ಅಂಗಕ್ಕೆ ಲಿಂಗಾಚಾರವಲ್ಲದೆ ಅಂಗಕ್ರೀಯೆಂಬುದನು ಅಂಗವಿಸರು ನೋಡಾ Cv. 90, 472]. ಇನಿತು ಇನಿತು ನೆನಪುಗಳಂಗವಿಪ ತಮ ತಮ್ಮ ಪವಣಿನ ನುಡಿಗಡಣೆಯಿನ್ದ ವಿನುತಿಸುವಡೆ ಅದು ಕೊಱತೆ, ಅಲ್ಲಾ? (Bp. 7, 10). ಲಿಂಗವನ್ತನ ಬರವಿಗೆ ಅವರುಗಳ್ ಅಡ್ಡಗಟ್ಟಿ ಇರಲು, ತುಂಗ ವಿಕ್ರಮನ್ ಅಯ್ಸಜಿಲಿ ವಸ್ತ್ರಂಗಳಂ ಪೊತ್ತು, ಅಯ್ತರುತ ನೆರದು ಅಂಗವಿಸಿ ಬಪ್ಪವರನ್ ಆ ಮದದಾನೆಯಂ ಕಣ್ಡು (21, 39). ಮುನ್ನಿನ ಕರ್ಮಕೆ ಇನ್ನು ಆರ್ ಅಂಗವಿಸುವವರು? (45, 40). ಅದಕೆ ಅಂಗವಿಸಿ, ದಯಗೆಟ್ಟು (55, 15). ಹಿಂಗದೆ ಆ ಭುಕ್ತಾವಶೇಷವನ್ ಅಂಗವಿಸಿ, ಮೊಗಮೊಗದು (56, 12). see C. Bp. 37, 49; V. 39, 23.

ಅಂಗವೈಕಲ್ಯ aṅga-vaikalya. a defective or imperfect state of any limb or organ. (My.; B. 4, 34).

ಅಂಗಸಂಸ್ಕಾರ aṅga-saṁskāra. *embellishment of person, bathing, perfuming and adorning the body.*

ಅಂಗಸಂಗ aṅga-saṅga. bodily contact, coition. (My.; J. 23, 59).

ಅಂಗಸ್ತಾನ aṅgastāna. = ಅಂಗುಸ್ತಾನಿ. (S. Mhr.).

ಅಂಗಹಾರ aṅga-hāra. *gesticulation.* 2, a kind of dance (ಒನ್ದು ತರದ ಕುಣಿತ G.).

ಅಂಗಹೀನ aṅga-hīna. *mutilated, maimed.* 2, incorporeal. 3, Kāma.

ಅಂಗಹೀನತ aṅga-hīnata. a man who is mutilated. ಅಂಗಹೀನತನ್ ಅದೊಡಂ (Bp. 38, 54).

ಅಂಗಹೀನತೆ aṅga-hīnate. the state of being mutilated, etc. (My.).

ಅಂಗಳ aṅgaḷa. = ಅಂಗಳು, ಅಂಗುಳ, ಅಂಗುಳಿ, ಅಂಗುಳೆ, (ಅಟ್ಟಣ). the palate of the mouth (C.; Te. ಅಂಗಿಲಿ; T. ಅಣರಿ, ಅಣ್ಣ; M. ಅಣ್ಣ; *cf.* ಅಣ್ 2); [throat. ಜಗಕ್ಕೆ ಪಿತನೊಬ್ಬನೆ ಅಲ್ಲದೆ ಇಬ್ಬರೆಂದು ಬಗಳುವನ ಬಾಯಲ್ಲಿ ಸಮ್ಮ ಪಡಿಹಾರಿ ಉತ್ತಣ್ಣಗಳ ಎಡದ ಪಾದರಕ್ಷೆಯ, ಅವನಂಗಳ ಮುಟ್ಟೆಕ್ಕುವೆನೆಂದ ಕೂಡಲ ಚನ್ನಸಂಗಮ ದೇವಾ Cv. 488]. — ಅಂಗಳದ ಮುಳ್ಳು. = ಅಂಗುಳಿಯ ಮುಳ್. (My.).

ಅಂಗಳ aṅgaḷa. = ಅಂಗಣ, etc. (ಚತ್ವರ, o. r. ಚಪ್ಪರ, ಪ್ರಾಂಗಣ Nn. 143; ಚತ್ವರ, ಅಜಿರ, ಅಂಗಣ Si, 110; My.). ಹಟ್ಟಿಯ ಅಂಗಳ (ಚತ್ವರ, ಅಜಿರ, ಅಂಗಣ Si. 110). ತಲಬಾಗಿಲ ಮುನ್ದುಗಡೆ ಇರುವ ಅಂಗಳ (ಪ್ರಘಣ, ಪ್ರಘಾಣ 110). ಮನೆತಲಬಾಕಲುಮುನ್ದೆ ಇರುವ ಬಯ್ಲು, ಅಂಗಳ (ಮುಖ, ನಿಸ್ಸರಣ 113). ಪಟ್ಟಣದ ಸುತ್ತಲೂ ಪುರ ಜನಸಂಚಾರಾದಿಗಳಿಗೆ ಆಗಿ ಬಿಡಲ್ ಪಟ್ಟು ಇರುವ ಬಯ್ಲು, ಊರುಹೊಱಗಣ ಅಂಗಳ (ಸನ್ನಿವೇಶ, ನಿಕರ್ಷಣ 113). ಹಿತ್ತಲ ತೋಟ, ಅಂಗಳ ತೋಟ (ಗೃಹಾರಾಮ, etc. 118). ನಾಲ್ಕು ಕಡೆಯೂ ಅಭಿಮುಖಮಾಗಿ ಕೆಯ್ಸಾಲೆ ಕಟ್ಟಿ ಮಧ್ಯದಲ್ಲಿ ಅಂಗಳವನ್ನು ಬಿಟ್ಟುಕೊಣ್ಡು ಇರುವ ಮನೆ (ಸಂಜವನ, etc. 107). ಅಂಗಳ ದಲ್ಲಿ ಆಗಲಿ ಹಿತ್ತಲಲ್ಲಿ ಆಗಲಿ ಹೊಲಸು ಇರಗೊಡ ಬಾರದು (B. 4, 25). ಅಂಗಳದಲ್ಲಿ ಹೇತು, ಮಂಗಳ ಕಷ್ಟ ಅನ್ದ ಹಾಗೆ (Prv.). [ಅಗಂ+ಕಳ?].

ಅಂಗಳು aṅgaḷu. -ಳ್. = ಅಂಗಳ. (My.). ನಾಲಿಗೆಯೂ ಅಂಗಳೂ ಅದಱ ಸವಿ ತಕ್ಕೊಳ್ಳುತ್ತವೆ (B. 4, 85). ನಾಲಿಗೆ ಅಂಗಳುಗಳಿನ್ದ ಸ್ವಾದ ತಿಳಿಯುತ್ತದೆ (4, 86).

ಅಂಗಾಂಗಿ aṅga-aṅgi. limb and limb, jointly or reciprocally, in consequence of being related, as one limb to another or to the body (Kāvy. III, 3, B, 164 under saṁślēṣa).

ಅಂಗಾತ aṅgāta. = ಅಂಗತ, etc. flatways, on the back (C.; ಉತ್ತಾನ G.). ಅಂಗಾತ ಬೀಱು (C.).

ಅಂಗಾಧಿಪ aṅga-adhipa. Karṇa, the king of Aṅga (Śmd. 263).

ಅಂಗಾರ aṅgāra. = ಅಂಗರ. *charcoal, either heated or not heated* (ಇಂಗಳ Ct. II, 56; ಅಂಗಿರ, ಕೆಣ್ಡ, ಇಂಗಳ Śm. 11; ಕೊಳ್ಳಿ, ಕೆಣ್ಡ G.). 2, the planet Mars (ಮಂಗಳ G.). 3, ashes (see G. s. ಅಂಗರ; Mhr.). see Prv. s. ವೈಷ್ಣವ. 4, one of the gandharvas (Bh. 1, 11 sum.). — ಅಂಗಾರಗಡ್ಡೆ. = ಅಂಗರಗಡ್ಡೆ. the plant Physalis flexuosa Lin. (St. & Pl.).

ಅಂಗಾರಕ aṅgāraka. = ಅಂಗಾರ No. 1. 2, *the plant Mars* (ಶಿಖಿ, ಮಂಗಳ Nn. 4). 3, a sectarial mark made with charred wood or ashes. 4, the plant Eclipta prostrata (ಗರುಗ, ಭೃಂಗ Mr. 130). ಅಂಗವಸ್ತ್ರ ಇಲ್ಲದಿದ್ದರೆ ಅಂಗಾರಕ ಇಡಬಾರದೇ? (Prv.).

ಅಂಗಾರಕವಾರ aṅgāraka-vāra. Tuesday. (My.).

ಅಂಗಾರಧಾನಿಕೆ aṅgāra-dhānike. *a portable fire-place.*

ಅಂಗಾರವಲ್ಲರಿ aṅgāra-vallari. *the plant Galedupa arborea* (= ಮರ್ಕಟ, ಷಡ್ಗ್ರಂಥ).

ಅಂಗಾರವಲ್ಲಿ aṅgāra-valli. *the plant Glerodendrum siphonanthus* R. Br. (Siphonanthus indica).

ಅಂಗಾರಶಕಟಿ aṅgāra-śakaṭi. *a portable fire-place* (ಬಾಣಲೆ Mr. 211).

ಅಂಗಾರಸ್ಫೋಟಕ aṅgāra-sphōṭaka. = ಅಂಗರವೋಳಿಗೆ. a cake (hōḷige) baked on coals.

ಅಂಗಾಲ್ aṅgāl. -ಲು. see s. ಅಂ– (ಅಙ್–).

ಅಂಗಿ aṅgi. 1. having limbs (Śmd. 136).

ಅಂಗಿ aṅgi. 2. a coat, a frock, a jacket (C.; H., Mhr.). ಹಬ್ಬಕ್ಕೆ ಒನ್ದು ಅಂಗೀ ಹೊಲಿಸಿ ಕೊಡುತ್ತೇನೆ (B. 1, 26). ದೊಡ್ಡವನು ತೊಟ್ಟು ಕೊಣ್ಡ ಅಂಗಿಯು (4, 92). ಅಂಗಿಯನ್ನೂ ಟೊಪ್ಪಿಗೆಯನ್ನೂ ಹಾಕ ಬೇಕಾ ಗುತ್ತದೆ (5, 273). ಅಂಗಿ ಕೊಟ್ಟು, ಬಂಗಿ ಸೇದಿ, ಮಂಗನಾದ. — ಅಂಗನೆ ಬರುವಾಗ ಅಂಗಿ ತೊಡ ಬೇಡವೇ? — ಅಂಗಿಗೆ ಇಲ್ಲದಿದ್ದರೆ ನುಂಗಲಿಕ್ಕೆ ಬೇಡವೇ? (Prvs.). see ನಿಲವಂಗಿ.

***ಅಂಗಿಗೆ aṅgige** = ಅಂಗಿ 2. ದೊರೆಯೊಳೊಡಂಬಟ್ಟಸಿಯ ಸುರಗಿವಳಿವದ ತೊಟ್ಟಂಗಿಗೆ ತನ್ನೊಳಮರೆ ಬೇಂಟೆಯನೊರ್ವಂ Pb. 5, 36.

ಅಂಗಿರಸ್ aṅgiras. N. of a ṛiṣi.

ಅಂಗಿರಸ aṅgirasa. Tbh. of ಅಂಗಿರಸ್. (Mr. 258).

ಅಂಗೀ— aṅgī. assent.

ಅಂಗೀಕರಣ aṅgī-karaṇa. assenting, agreeing, accepting; promising. see ಒಪ್ಪು ಕೆಯ್.

ಅಂಗೀಕರಿಸು aṅgī-karisu. to agree to, to accept, to adopt, to choose, to promise. (Śmd. 5; Bp. 40, 88; My.). ಅಂಗೀಕರಿಸಿ ದಲ್ಲಿ (ಪಕ್ಷೀಕರ Nn. 112). ಕಬ್ಬಿಗರ ಕೆಯ್ಪಿಡಿಯನ್ ಅಂಗೀಕರಿಪುದು ಅಖಿಲಸುಜನರ್ಕಳು (Kk. 101). ಅಂಗೀಕರಿಸಲ್ ಪಟ್ಟವನು (ವೃತ, ವೃತ್ತ, etc. Si. 378).

ಅಂಗೀಕರಿಸುವಿಕೆ aṅgī-karisuvike. agreeing, etc. (Si. 389).

ಅಂಗೀಕಾರ aṅgī-kāra. = ಅಂಗೀಕರಣ. *assenting, agreeing,* etc. see ಒಪ್ಪು, ಅಪ್ಪು ಕೆಯ್, ಎಮ್ಬು ಕೆಯ್.

ಅಂಗೀಕೃತ aṅgī-kṛita. *agreed to, accepted, promised.*

ಅಂಗೀಕೃತಿ aṅgī-kṛiti. *agreement, assent, promise.*

ಅಂಗು aṅgu. = ಪಂಗು, etc. (My.).

ಅಂಗುಟ aṅguṭa. Tbh. of ಅಂಗುಷ್ಠ. (Rśv. 6, 11 va; My.). 2, the leather-nose of a sandal (My.).

ಅಂಗುಡಿ aṅguḍi. ಅಂಗುಡಿ ವಸರಂ (Ct. I, 85, o. r. ಉಂಕುಡಿ).

ಅಂಗುರಿ aṅguri. = ಅಂಗುಲಿ. *a finger; a toe.*

ಅಂಗುಲ aṅgula. -ಳ. a finger (Bp. 15, 11; 46, 58; ಬೆರಳು G.; My.). 2, the thumb. 3, *a finger's breadth, a measure equal to eight barley corns, an inch.* 4, N. of the sage Cāṇakya.

ಅಂಗುಲಿ aṅguli. -ಳಿ. *a finger.* 2, a toe. 3, the thumb. 4, the great toe. 5, *the finger-like tip of an elephant's trunk.* 6, = ಕಚೋರ, ಅರಿ ದಾಳ Mr. 102. 7, an ornament for the ears of an elephant (ಆನೆಯ ಕಿವಿಯೊಳಗಿನ ಆಭರಣ G.). 8, = ಅಂಗುಲೀಯ (My.).

ಅಂಗುಲಿಕ aṅgulika. = ಅಂಗುಲ (J. 5, 65; Sk. ಅಂಗುಲಕ).

ಅಂಗುಲಿಕ್ರಿಯೆ aṅguli-kriye. a performance with the fingers. see ಬೆರಣ್ಣು.

ಅಂಗುಲಿಖನನ aṅguli-khanana. digging with the fingers. see ಹರಡು.

ಅಂಗುಲಿತ್ರಾಣ aṅguli-trāṇa. a finger protector, a contrivance like a thimble used by archers to protect the fingers from being injured by the bow-string. (R.).

ಅಂಗುಲಿದರ್ಶನ aṅguli-darśana. pointing at with the finger. see ಸುಟ್ಟು.

ಅಂಗುಲಿಪ್ರಹರಣ aṅguli-praharaṇa. striking, shooting or propelling with the finger. see ಅಡೆ, ಅಣೆ, ಮಿಡಿ, ಸೊಣೆ.

ಅಂಗುಲಿಮುದ್ರೆ aṅguli-mudre. *a seal-ring.*

ಅಂಗುಲಿಮೋಟನ aṅguli-mōṭana. snapping or cracking the fingers. (R.).

ಅಂಗುಲಿವಿಸರ್ಜನ aṅguli-visarjana. sending forth the fingers or letting them loose. see ಚಿಗಿ.

ಅಂಗುಲಿಸನ್ದೇಶ aṅguli-sandēśa. snapping or cracking the fingers as a sign. (R.).

ಅಂಗುಲಿಸಮ್ಭೂತ aṅguli-sambhūta. produced on or from the finger, a finger nail. (R.).

ಅಂಗುಲೀಯ aṅgulīya. = ಅಂಗುಲೀಯಕ. (My.).

ಅಂಗುಲೀಯಕ aṅgulīyaka. *a finger-ring.*

ಅಂಗುಷ್ಠ aṅguṣṭha. = ಅಂಗುಟ, ಉಂಗುಟ, ಉಂಗುಟ್ಟ. *the thumb* (ಹೆಬ್ಬೆರಳು G.). 2, the great toe. 3, a thumb's breadth. ಅಂಗುಷ್ಠ ಬಾತರೆ ಪರ್ವತವಾದೀತೇ? (Prv.).

ಅಂಗುಸ aṅgusa. Tbh. of ಅಂಕುಶ. (My.).

ಅಂಗುಸ್ತಾನಿ aṅgustāni. = ಅಂಗಸ್ತಾನ. a thimble (Mhr. ಅಂಗುಸ್ಥಾನ, Br. ಅಂಗುಸ್ತಾನು; R.).

ಅಂಗುಳ aṅguḷa. = ಅಂಗಳ, etc. the palate. —ಅಂಗುಳವಜು. -ಬಜು. the palate to become dry. ತುಟಿಗಳು ಮಿಡುಕದೆ, ಅಂಗುಳ ವಜಿತು, ಗುಕ್ಕೆನ್ನದೇ (Bp. 54, 81).

ಅಂಗುಳ aṅguḷa. = ಅಂಗುಲ. (My.).

ಅಂಗುಳಿ aṅguḷi. = ಅಂಗಳ, etc. —ಅಂಗುಳಿಯ ಮುಳ್. a disease of the uvula, attended with difficulty of breathing and swallowing. (ಶಿಶುವಿನ) ಅಂಗುಳಿಯ ಮುಳ್ಳಂ ಸುದತಿ ತನ್ನ ಅಂಗುಳದಿನ್ ಒತ್ತುವಳು (Bp. 15, 11). ನಿನಗೆ ಏನ್? ಅಜೀರ್ಣದ ಕೋವೆಯೋ? ಅಂಗುಳಿಯ ಮುಳ್ಳೋ? (15, 20).

ಅಂಗುಳೆ aṅguḷe. = ಅಂಗುಳಿ.—ಅಂಗುಳೆಮುಳ್. = ಅಂಗುಳಿಯಮುಳ್. ಇದೆ! ಮುಟ್ಟನಲಿ ಬೊಪ್ಪಂಗೆ ಬೆಟ್ಟತು ಅಂಗುಳೆಮುಳ್ಳದು ಆಯಿತು! ಕೆಟ್ಟೆನ್! ಇನ್ನು ಏಗುವೆಂ? (Bp. 15, 22).

ಅಂಗೂರ aṅgūra. a grape, or grapes. (R.; Br. ಅಂಗೂರು; Mhr., H. ಅಂಗೂರ).

ಅಂಗೂಷ aṅgūṣa. rapid in motion. 2, an arrow. 3, an ichneumon. (R.).

ಅಂಗೆಯ್ aṅgey. ಅಂಗೈ. see s. ಅಂ– (ಅಙ್–).

***ಅಂಗೆಯ್ಸು aṅgeysu.** to undertake, to assume. ಅವ ನೇಮ ವಾದರೇನು ಹೇಮವಿಲ್ಲದಂಗೆಯ್ಸಬಹುದೇ? Bv. 438; Cv. 383. (*cf.* ಅಂಗವಿಸು).

ಅಂಗೋದ್ಭವ aṅga-udbhava. Kāma (J. 3, 29).

ಅಂಗೋಪಾಂಗ aṅga-upāṅga. the body and its members (J. 19, 16).

ಅಂಗೋಸ್ತ್ರ aṅgōstra. Tbh. of ಅಂಗವಸ್ತ್ರ (Si. 222).

ಅಂಗ್ರಾಣೆ aṅgrāṇe. = ಅಂಗರಣೆ. (My.).

ಅಂಘ್ರಿ aṅghri. a foot (ಕಾಲು Nn. 130; Mr. 332); the fourth part (My.). 2, *the root of a tree.* 3, a verse-line (Ch.).

ಅಂಘ್ರಿಜ aṅghri-ja. the foot-born: a Śūdra (My.).

ಅಂಘ್ರಿತಲ aṅghri-tala. a foot (ಅಡಿ Ct. I, 102).

ಅಂಘ್ರಿತ್ರಾಣ aṅghri-trāṇa. a shoe (Bp. 55, 57).

ಅಂಘ್ರಿಪ aṅghri-pa. drinking with the foot or root. 2, *a tree.*

ಅಂಘ್ರಿಪರ್ಣಿಕೆ aṅghri-parṇike. = ಅಂಘ್ರಿವಲ್ಲಿಕೆ. (Si. 144).

ಅಂಘ್ರಿವಲಯ aṅghri-valaya. the circumference of the foot or the hoof (of a horse, Mr. 278).

ಅಂಘ್ರಿವಲ್ಲಿಕೆ aṅghri-vallike. *the plant Hedysarum logopodioides* Roxb. (see Si. 144).

ಅಚ್- ac. = ಅರೆ-2. —ಅಚ್ಚೇರು. -ಸೇರು. half a *seer* (C.; Mhr.)

ಅಚಕ್ಷು a-cakṣu. Tbh. of ಅಚಕ್ಷುಸ್. (ಅಬಾಗಣ್ Mr. 159).

ಅಚಕ್ಷುಸ್ a-cakṣus. *a bad or miserable eye, no eye.* 2, blind.

ಅಚಣ್ಡ a-caṇḍa. not of a hot temper, gentle, tractable.

ಅಚಣ್ಡಿ a-caṇḍi. *a tractable cow.*

ಅಚತುರ a-catura. not dexterous. (My.; feminine ಅಚತುರೆ).

ಅಚಪಲ a-capala. not oscillating; unmovable, steady. (My.).

ಅಚಪಲತೆ a-capalate. steadiness. (My.).

ಅಚಮತ್ಕಾರ a-camatkāra. want of admiration; a style which is not elaborate (Bp. 1, 18).

ಅಚರ a-cara. immovable. (My.). see ಚರಾಚರ.

ಅಚಲ a-cala. immovable, fixed (ಅಲ್ಲಾಡದ್ದು. ಸ್ಥಿರ G.). 2, perpetual, eternal (ನಿತ್ಯ, ಕೇಡಿಲ್ಲದುದು Nn. 41). 3, *a mountain* (ಅದ್ರಿ, ಪರ್ವತ 41). 4, the earth (ಭೂಮಿ G.). 5, exemption from further transmigration (ಅಪುನರ್ಭವ, ಮುಕ್ತಿ 41). 6, an ascetic (ಪರಮಯೋಗಿ. ಎತಿ 41). 7, a ray (ಮರೀಚಿ, ಕಿರಣ 41). 8, a man of a barbarous mountain tribe (ಪಾಮರ, ಕಿರಾತ 41). 9, a bolt or pin.

ಅಚಲರಿಪು acala-ripu. the mountain-foe: Indra (Cb.).

ಅಚಲಿತ a-calita. not shaking; immovable. (Bp. 6, 3; 7, 4; 13, 9; 39, 9).

ಅಚಲೆ a-cale. *the earth.*

ಅಚಲೇನ್ದ್ರ acala-indra = ಅಗೇನ್ದ್ರ.

ಅಚಲೇನ್ದ್ರತನುಜೆ acalēndra-tanuje. Pārvatī (J. 15, 17).

ಅಚಾತುರ್ಯ a-cāturya. want of dexterity or ability. (B. 4, 89; ಮೂಢತ್ವ (Cb.; My.).

ಅಚಿ aci. = ಛೀ. (My.). — ಅಚಿಚಿ. impurity, filth (My.).

ಅಚಿಕ್ಕಣ a-cikkaṇa. *not smooth, rough.*

ಅಚಿನ್ತ a-cinta. free from anxiety (Bp. 8, 47).

ಅಚಿನ್ತ್ಯ a-cintya. surpassing all thought or conception. (My.).

ಅಚಿರ a-cira. not of long duration, brief, momentary. 2, recent.

ಅಚಿರದ್ಯುತಿ acira-dyuti. lightning. (My.).

ಅಚಿರರೋಚಿಸ್ acira-rōcis. lightning. (R.).

ಅಚಿರಾಂಶು acira-aṁśu. *lightning* (ಮಿಂಚು Mr. 43).

ಅಚುಮ್ಬಿತ a-cumbita. not kissed. 2, unconnected, incongruous (My.).

ಅಚೇತ a-cēta. Tbh. of ಅಚೇತಸ್. (My.); also: very poor (My.).

ಅಚೇತನ a-cētana. destitute of consciousness, inanimate (My.; ಜೀವವಿಲ್ಲದದ್ದು G.). 2, unconscious, insensible, fainting (My.; ಪ್ರಾಣವಿಲ್ಲದ G.). see ಚೇತನಾಚೇತನ. ಅಚೇತನಪದಾರ್ಥಗಳು (B. 4, 13).

ಅಚೇತನಾರ್ಥ acētana-artha. an inanimate thing (Kāvy. V, 939).

ಅಚೇತಸ್ acētas = ಅಚೇತ, ಅಚೇತನ. (Sk.).

ಅಚೈತನ್ಯ a-caitanya. unconsciousness; insensibility; ignorance; the material world; matter; — also: great poverty (My.).

ಅಚೋದ್ಯ a-cōdya. not marvellous, not strange. (R.).

ಅಚ್ಚ acca. = ಅಚ್ಚು 1, q. v. (S. Mhr.). — ಅಚ್ಚಕಟ್ಟು. = ಅಚ್ಚುಕಟ್ಟು. a well-defined or proper boundary or proportion; suitable order, size, weight, etc. (S. Mhr.). ಅಚ್ಚುಕಟ್ಟಾದ ಕೆಲಸ ಚನ್ದ, ಬಸ್ಸುಕಟ್ಟಾದ ಊಟ ಚನ್ದ (Prv.). — ಅಚ್ಚಕಟ್ಟುಮಾತು. a proper word (S. Mhr.). — ಅಚ್ಚಕಟ್ಟುಹಾಸಿಗೆ. a bed of proper size (S. Mhr.). — ಅಚ್ಚಕಟ್ಟೂಟ. -ಊಟ. a meal that suits one's means; a nice meal.

ಒಚ್ಚತೆ occata. (fr. ಒಚ್–). equality, harmony (M. ಒಚ್ಚ); agreeableness, the quality of pleasing (J. 30, 2); pleasure, delight; delightfully, etc. ಪುಗಲ್ ಪುಗಲ್ ಎನ್ದು, ಒಚ್ಚತ ಊಳ್ವ ಕೋಗಿಲೆಯಂ (Śmd. 74). ನಿಬ್ಬರಮ್ ಎನ್ದು, ಒಚ್ಚತಮ್ ಇಲ್ಲೆನ್ಬುದರ್ಥಂ (Ct. I, 89). see Sp. s. ಲಂಚ. (Cpr. 10, 114; Śśv. 2, 89, 91; Bh. 7, 3, 76). — ಒಚ್ಚತಂಗುಡು. -ಂ-ಕುಡು. to give pleasure (Cpr. 8, 72 va.). — ಒಚ್ಚತಂಗೊಳ್. -ಂ-ಕೊಳ್. to unite, to combine, to link closely or harmoniously together (Grj. 4, 33 va.). 2, to be pleased (Grj. 4, 48 va.); to be pleased with, to desire (Bp. 26, 18). 3, to become delightful (J. 26, 19).

ಒಚ್ಚಯ occaya. = ಒಚ್ಚೆ, ಒಚ್ಚೆಯ, (ಬಚ್ಚ 1). disgrace; dishonor; opprobrium; impropriety (Te. ಒಚ್ಚೆ); a wanton joke, a lewd expression; contempt (T. ಒಚ್ಚ, ಒಚ್ಚಯ). ಒಚ್ಚಯಂಗಳ ಮಚ್ಚುಗಳು (Bp. 40, 61).

ಒಚ್ಚಿ occi. = ಒಚ್ಚಯ, etc. — ಒಚ್ಚಿಹೊತ್ತು. improper time (Bp. 28, 41).

ಒಚ್ಚು occu. = ಒಪ್ಪಿಸು to join (v. t., Rām. 3, 6, 55; ವಚ್ಚು in the print).

ಒಚ್ಚೆಯ occeya. = ಒಚ್ಚಯ, etc. ಅದಿತೇಯ ಸಮುಚ್ಚಯವನ್ ಒಚ್ಚೆಯವನ್ ಅಯ್ದಿಸೆ ಬಾಧಿಸಿದಂ (Bp. 16, 2).

ಒಜನ ojana. = ವಜನು. gravity, heaviness, weight; a weight; weight, dignity, influence (S. Mhr.; Mhr., H. ಬೋಜ, ಬೋಜಾ, ವಜನ; Tu. ಒಜನು; cf. ಒಜ್ಜೆ).

ಒಜ್ಜರ ojjara. = ವಜ್ಜರ, ವಜ್ಜರಕ್ತೆ. a spring, a fountain (Tu. ಉಜ, ಉಜೆ; cf. ಒಱ 1, ಒಸರ್ 1; ಉಗು 1?). ಬೆಟ್ಟದ ಒಜ್ಜರ (ಉತ್ಸ, ಪ್ರಸ್ರವಣ, ವಾರಿಪ್ರವಾಹ, ನಿರ್ಝರ, ಝುರ Nr.). Cpr. 7, 81 va. (where it appears to be ಒಗರಗೆ 2, cf. ಓಜರ).

ಒಜ್ಜರ ojjara. Tbh. of ವಜ್ರ. diamond (C.).

ಒಜ್ಜೆ ojje. = ವಜ್ಜೆ, ವಜನು, ವಜೆ 2. a weight, load, burden (S. Mhr. Mhr. ಓಝೀಂ; B. 3, 18. 49. 117; 4, 214).

ಒಟ oṭa. = ವಟ 1. an imitative sound. — ಒಟ ಒಟ. rep. ಒಟ ಒಟ ಮಾತಾಡು, to talk much; to prate, to gabble (S. Mhr.; Mhr. ವಟ ವಟ). — ಒಟಗುಟ್ಟು. -ಕುಟ್ಟು. to say or talk much; to gabble (S. Mhr.).

ಒಟಾರ oṭāra. = ವಟಾರ q. v., ವಟ್ಟಾರ. the compound round a house (C.; Tu.; T. ವಟ್ಟಾರ; Te. ವಟಾರು, ವಠಾರ, a lodge).

ಒಟ್ಟ oṭṭa. = ವಟ್ಟ 1, q. v. discount, etc. (C.; Tu.; Mhr., H. ಒಟ್ಟಾ, exchange). see Prv. s. ಮುಟ್ಟು 1.

ಒಟ್ಟಜ oṭṭaja. tribute (ಕಪ್ಪ Śm. 38, see ಕೊಟ್ಟಜ; M. ಒಡುಕ್ಕು, to finish, destroy; to spend; to pay taxes).

ಒಟ್ಟಜೆ oṭṭaje. 1. a heap, a mass, a company; abundance; a row (ಒಟ್ಟಿಲ್, ಒಗ್ಗುರ್, ಹೊರಳಿ, ಒಬ್ಬುಳಿ, etc., ಶ್ರೇಣಿಕೆ Kk. 17; ಸನ್ದಣಿ, ಕಿಕ್ಕಿಸ್ತ, ತಣ್ಣ, etc., ಶ್ರೇಣಿ Śm. 54; ಗಡಣ Ct. I, 50; ಅತಿಶಯಾರ್ಥ II, 51). [ಇನ್ತು ನಿತ್ಯೋತ್ಸವಂಗಳ್ ಕೆಲವು ಕಾಲಂ ಸಲೆ ಸಲ್ಗೆವೆರಸಿದ ತನ್ನ ನಣ್ಪನೊಟ್ಟಜೆಯಿಂ ತೋಱ Ap. 4, 52 va.]. see Abh. P. 14, 168; Grj. 7, 11 va.; 10, 79 va.; 10, 101; Rśv. 5, 117; 6, 11 va.; 13, 83 va. — ಒಟ್ಟಜೆಗಿಡು. -ಕಿಡು. to break up (v. i.), to disperse (Abh. P. 13, 109 va.).

***ಒಟ್ಟಜೆ oṭṭaje.** 2. valour, gallantry ಕೂರದರ್ ನೆಲನನೊಟ್ಟಜೆಯಿಂ ಕೊಳೆ Pb. 7, 55.

ಒಟ್ಟಯಿಸು oṭṭayisu. = ಒಟ್ಟಯ್ಸು, etc. to overpower (Bp. 61, 26); to pile up (Cpr. 5, 64 va.).

ಒಟ್ಟಯ್ಸು oṭṭaysu. ಒಟ್ಟೈಸು. = ಒಟ್ಟಯಿಸು, ಒಟ್ಟವಿಸು. to collect, to be accumulated, as tears (Sarpabhūṣaṇa in B. 5, 320); to become one, to collect, to be converged to a focus (Grj. 8, 50); to come together, to assemble (Abh. P. 14, 132 va.); to shrink, to contract (Grj. 1, 87). 2, to join (v. t.), to amass, to heap together, to pile up (Bp. 16, 8); to assemble (v. t.), to convene (Grj. 2, 106 va.); to subject, to conquer, to overwhelm (Bh. 1, 7, 62; J. 25 sum.). [ಜರೆ ಬನ್ದೊಟ್ಟೈಸೆ ಮಾಣ್ದ ದೇಳಿಪೆನಗಿದೆ ಮುಂ ಸಾಲದೇ Ap. 2, 49; ತನ್ನಿಚ್ಛೆಯಿನ್ದಂ ನೆಱದುಮೊಟ್ಟಯಿಸಿಯುಯ್ದು ನೊಱದು Vr. 51, 7].

ಒಟ್ಟಲು oṭṭalu. a mass, a heap (My.).

ಒಟ್ಟವಿಸು oṭṭavisu. = ಒಟ್ಟಯ್ಸು. to join together (v. t., Bp. 11, 15).

ಒಟ್ಟಳ oṭṭaḷa. = tumult. (Cpr. 5, 104).

ಒಟ್ಟಿ oṭṭi. 1. (fr. ಒರಟು 2). an obstinate, self-willed person (S. Mhr.).

ಒಟ್ಟಿ oṭṭi. 2. a kind of machine for uniting or twisting threads into twine or rope (C.). 2, stiffness of a limb, *e. g.* ಕಾಲಿಗೆ ಒಟ್ಟಿ ಹಿಡಿಯಿತು (S. Mhr.).

ಒಟ್ಟಿ oṭṭi. 3. = ಉಟ್ಟಿ 2 No. 2. the upper piece of the frame-work of a cradle.

ಒಟ್ಟಿಕೆ oṭṭike. heaping (My.).

ಒಟ್ಟಿಲ್ oṭṭil. -ಲು. = ಒಟ್ಟಜೆ 1. a heap, mass. (Cpr. 9, 80; ಒಟ್ಟಜೆ, etc. Kk. 17; Śm. 54; ಶರೆ Mr. 350). ಪ್ರವಾಹದಿನ್ದೆ ಆದ ಮಳಲ ಒಟ್ಟಿಲು (ಪುಲಿನ Nr.). [ಬಣಜಿಗನೇಸು ಭಕ್ತನಾದರೆಯೂ ಒಟ್ಟಿಲ ಬೆನಕನ ಹಂಗ ಬಿಡ! Bv. 450]. see ನೀರೊಟ್ಟಿಲಾಣ್ಮ; ಮಳಲೊಟ್ಟಿಲ್; Grj. 10, 79 va.; J. 6, 6.

ಒಟ್ಟಿಸು oṭṭisu. = ಒಟ್ಟಯ್ಸು. to join (v. t.), to heap, etc. (ಪುಂಜೀಕರಣ Śmd. Dh.). see Bp. 57, 16. 18. 2, to cause to heap or pile up, etc. (C.; Bh. 1, 8, 88; B. 5, 43. 50).

ಒಟ್ಟು oṭṭu. 1. (fr. ಉಱು). = ಒಡ್ಡು 3. to make one, to join; to put together; to pile up, etc. (ಏಕಕ್ರಿಯೆ Śmd. Dh.; ಮೊಗ್ಗರ Śm. 88; C., Tu.; T., to paste, to cause to adhere). [ಅನ್ತು ಕನಕತೇಣಂಗಳ್ ಪುಟ್ಟಿದ ಪಾಸಱೆಗಳುಮಂ ಕನಕದ ಪಿರಿಯ ಸೆಲೆಗಳುಮನೊಟ್ಟಿ ಬೆಟ್ಟಾಗಿ ಪುಂಜಿಸಿ Pb. 6, 31 va.; Ap. 5, 19]; (Śsv. 2, 58). ಸತ್ತವನ ಸುಡಲೆನ್ದು, ಒಟ್ಟಿದ ಕಟ್ಟಿಗೆ (ಚಿತಿ Nr.). see Bp. 18, 28; 21, 8; 27, 37; 30, 4; 45, 30; J. 4, 38; B. 3, 44. 2, to come together, to assemble (Grj. 6, 8); to become one mass or heap (of ashes). ಹೊಟ್ಟೆಯಚ್ಯುತದೇವನ ಅಲಯಮನ್ ಒಟ್ಟಿಕೊಣ್ಡತು (Bp. 56, 34). 3, to become joined or united, to adhere to (as mud, etc., My.; Rśv. 5, 66).

ಒಟ್ಟು oṭṭu. 2. = ಒಡ್ಡು 4. conjunction, union (My., T., Tu., Te.); a heap, a pile (My.); sum total (My.; Mr. 63). 2, something not expanded: a germ, a bud (ಮೊಳಕೆ Śm. 88). 3, the close adhering or cohesion of a lump of clay (ಮೃತ್ಪಿಣ್ಡ ಸಂಘಟನ Śs.; *cf.* ಒಣ್ಡು). ಒಟ್ಟಿಗೆ (dative), all together: on the whole (C.). — ಒಟ್ಟಮ್ಮಾರ. -ಅಮ್ಮಾರ. the government and cultivator's corn before it is divided (My.). — ಒಟ್ಟಾರೆ. -ಆರೆ. = ಒಟ್ಟಿಗೆ. (S. Mhr.). ಒಟ್ಟುಕಟ್ಲೆಯವರು. -ಕಟ್ಲೆಯ ಅವರು. all the persons that have a case (in a kacēri, S. Mhr.). — ಒಟ್ಟುಗಿಚ್ಚು. -ಕಿಚ್ಚು. accumulation or mass of fire (Rām. 6, 4, 31). — ಒಟ್ಟುಗುತ್ತಿಗೆ. aggregate assessment (C.). ಒಟ್ಟುಗೂಡಿಸು. -ಕೂಡಿಸು. to join together (v. t.), etc. (C.). — ಒಟ್ಟುಗೂಡು. -ಕೂಡು. to compose a mass or pile (ಚಯನ, ಬೆರಂಜು, Śmd. Dh.). 2, to come together, to convene (My.; B. 2, 49); to become one in mind, etc. (My.). — ಒಟ್ಟು ಬೇರೀಜು. the total of an addition, the whole amount (C.). — ಒಟ್ಟುಲೆಕ್ಕ. sum total (C.). — ಒಟ್ಟೊಟ್ಟಿಗಿಡ. -ಒಟ್ಟಿ-. an undershrub, Triumfetta rotundifolia Lam.; also the undershrub Urena sinuata L. (Z.). — ಒಟ್ಟೊಟ್ಟಿಲ್. -ಒಟ್ಟಿಲ್. a large heap (J. 21, 48).

***ಒಟ್ಟು oṭṭu. 3.** to take a vow. ಭೀಷ್ಮನೆನ್ನ ಸ್ವಯಂವರದೊಳ್ ನೆರೆದರಸುಮಕ್ಕಳೆಲ್ಲರುಮನೋಡಿಸಿಕೊಣ್ಡು ಬನ್ದೆನ್ನಂ ಮದುವೆಯಂ ನಿಲಲೊಲ್ಲದೊಟ್ಟಿ ಕಳೆದೆನಡೆ Pb. 1, 76 va.

ಒಟ್ಟು oṭṭu. 4. a vow, a solemn promise; an oath, an adjuration (T.; Te. ಒಟ್ಟು, ವಟ್ಟು; T. ಒಟ್ಟು, a wager; see ಒಡ್ಡ 2; T. ವಟ್ಟು, to swear, etc.). — ಒಟ್ಟಿಟ್ಟುಕೊಳ್ಳು. -ಇಟ್ಟು-. to swear, etc. (ಶಪನ, ಶಪಥ, ಆಣೆ ಇಟ್ಟುಕೊಳ್ಳು Si. 55; see also 292).

ಒಟ್ಟೆ oṭṭe. = ಓಟೆ 3. a hole, a crack. (My.; Tu.). — ಒಟ್ಟೆ ಬೀಱು. to be cracked, to get a hole (My.).

ಒಟ್ಟೆ oṭṭe. = ಒಣ್ಟೆ, etc. Tbh. of ಉಷ್ಟ್ರ [ಆ ಪಡೆಯೊಳ್ ಗಣ್ಡನುಮಾಮೊಲಂ ದ್ರುಪದನುಂ ಪೇರೊಟ್ಟೆಯಾ ಮತ್ಸ್ಯನುಂ Pb. 10, 4; Vr; 97, 5]; (Śmd. 355; Hlā.; ಕರಭ Nn. 161; J. 7, 5). ಒಟ್ಟೆಯ ಮಱಿ (ಕರಭ Nr.).

ಒಡ oḍa. 1. = ಒಡಂ 1, ಒಡೆ 5. union, being together; together, with. (Te., Tu.). — ಒಡಗತೆ. -ಕತೆ. a riddle (S. Mhr.). [— ಒಡಗಲಸು. -ಕಲಸು. to become united, to unite. ಅಂಗದಲ್ಲಿ ಲಿಂಗ ಒಡಗಲಸಬೇಕು Cv. 690. — ಒಡಗಱೆ. -ಕಱೆ. to leave together. ನಡಪುಪದೇಶದಿನಲ್ಲದೊಡೊಡಗಱೆದಪೆವಸುವನಿಲ್ಲಿ ನಿನ್ನಡಿಮೊದಲೊಳ್ Ap. 6, 75]. — ಒಡಗೂಟ. -ಕೂಟ. close union, intimate intercourse (Abhā. 1, 33; My.). — ಒಡಗೂಡಿಸು. -ಕೂಡಿಸು. to cause to unite with, etc. (My.); to cause to be obtained, to prepare (J. 1, 2). — ಒಡಗೂಡು. -ಕೂಡು. to join (v. i.), to be united with, to be in connection or company with [ಪಲವುಮನೊಡಗೂಡಿರೆ ಸ್ವಿತಲಸದೆ ಪೇಱೆವೆಡೆಯೊಳಂ ಸ್ವಪಾದಾನ್ತದೊಳಂ Kr. 2, 20; 3, 78]; (Bp. 1, 48; 5, 41; 21, 29; 35. 39; 37, 68; C. Bp. 47, 4; Rśv. 4, 76; My.); to be obtained (Bp. 12, 52); to meet with success; to happen (J. 30, 28); to have sexual inter-course (My.; J. 11, 26; 16, 17; 27, 46). 2, to join (v. t.), to obtain, etc. (Bp. 56, 6). see 5, 71; 7, 10; 15, 19; 25, 11; 27, 13; 31, 4; Si. 47. 62. 211. 212. 264. 265. — ಒಡಗೊಳ್. -ಕೊಳ್. to join (v.i.), to become united with, etc. see Bp. 4, 5. 42; 5, 6; 8, 42; 12, 7; 24, 16; 31, 11; 42, 31; 47, 57; 51, 77. 78; 55, 9. J. 2, 44; 4, 65; 24, 40; 30, 42. 44; 32 sum. — ಒಡಂಗೊಳ್. -ಂ-ಕೊಳ್. = ಒಡಗೊಳ್. (J. 26, 33). — ಒಡಬಡಿಕೆ. -ಪಡಿಕೆ. = ಒಡಮ್ಬಡಿಕೆ, ಒಡಮ್ಬಡು 2. agreeing, assenting; an agreement; a treaty (ಸಮಾಧಿ Nr.; Bh. 8, 24, 50). — ಒಡಬಡಿಸು. -ಪಡಿಸು. = ಒಡಮ್ಬಡಿಸು. to cause to agree, to persuade; to convince; to put down as settled (Bp. 51, 12). — ಒಡಬಡು. -ಪಡು. = ಒಡಮ್ಬಡು 1. to agree; to assent; to consent; to accept as settled or proper. ನಾವೆನ್ದ ನುಡಿಗೆ ಒಡಬಡುವಿರಾದೊಡೆ (Bh. 1, 8, 77). ಒಡಬಟ್ಟು (Bp. 5, 10). — ಒಡವರ್. -ಬರ್. to come along with, to follow (Rśv. 5, 55 va., 114 va., & 120 va.; 6, 12). [— ಒಡವಳೆ. -ಬಳೆ. to grow together. ಒಡನಾಡಿಯುಮೊಡನೋದಿಯುಮೊಡವಳೆದುಂ ಗುಳ್ಳೆಗೊಟ್ಟೆ ಬಟ್ಟುಳಿಸೆಣ್ಡಂ Pb. 2, 30; Ap. 2, 50]. — ಒಡವುಟ್ಟು. -ಪುಟ್ಟು. = ಒಡಹುಟ್ಟು 1. [ಎನ್ನನ್ವಪ್ಪೊಡವುಟ್ಟಿದರಿನ್ನಿನಗೊಳರಾಗಲಹಿತರಿದಿರಾಪ್ಪರೆ ಪೇಱ್ Pb. 8, 34; Ap. 2, 62]: (My.). ಒಡವುಟ್ಟಿದನು (ಸಮಾನೋದರ್ಯ, ಸೋದರ್ಯ Hlā.). ಒಡವುಟ್ಟಿದನ ಮಗ (ಭ್ರಾತೃವ್ಯ, ಭ್ರಾತೃಪುತ್ರ Hlā.). ಒಡವುಟ್ಟಿದಳು (ಭಗಿನಿ, ಜಾಮಿ, ಸ್ವಸೃ Hlā.; ಕಿಱುದಂಗಿ Kk. 71). ಒಡವುಟ್ಟಿದಳ ಮಗ (ಸ್ವಸ್ರೀಯ, ಜಾಮೇಯ Hlā.). ಒಡವುಟ್ಟಿದಳ ಮದವನಂ (ಭಾವುಕ Hlā.). — ಒಡವೆರಸು. -ಬೆರಸು. = ಒಡೆವೆರಸು. to unite, to meet together, etc. (J. 8, 33). — ಒಡವೆರೆ. -ಬೆರೆ. = ಒಡೆವೆರೆ. to keep company with, to be united with, etc. (Rśv. 2, 8 va.; 5, 19 va.; 6, 24 va.). [— ಒಡವೇಱು. ಪೇಱು. to load upon one-self. ಪಸರಿಸಿ ದುಗ್ಧಾಬ್ಧಿ ಜಳ ಪ್ರಸರಮನೊಡವೇಱಿ ಬನ್ದು ಕಱೆವುವು ಮೇಘ ಪ್ರಸರಂಗಳ್ Ap. 1, 59]. — ಒಡ ಸಲ್. to go together with (Abh. P. 2, 75). — ಒಡ ಹುಟ್ಟು. 1. = ಒಡವುಟ್ಟು. to be born together with, to be born by the same father and of the same mother (My.). ಹೆಣ್ಡತಿಯ ಒಡ ಹುಟ್ಟಿದ ಅಣ್ಣ ತಮ್ಮಂದಿರು (ಸ್ಯಾಲರು); ಒಡ ಹುಟ್ಟಿದ ಅಣ್ಣನು (ಅಗ್ರಜ, etc. Nr.).

ಗಣ್ಡನಿಗೆ ಒಡ ಹುಟ್ಟಿದ ಗಣ್ಡುಸ (ದೇವರ); ಒಡ ಹುಟ್ಟಿದವನು (ಸೋದರ್ಯ, etc. Si. 192). ಒಡ ಹುಟ್ಟಿದವಂ (ಸಹಜಾತ, ಸಹೋದರ, ಭ್ರಾತೃ Mr. 311; J. 28, 56). ತನ್ದೆಯ ಒಡ ಹುಟ್ಟಿದವನು (ಪಿತೃವ್ಯ, etc.); ತಾಯ್ಯ ಒಡ ಹುಟ್ಟಿದವನು (ಮಾತುಲ); ಗಣ್ಡನ ಒಡ ಹುಟ್ಟಿದವನು (ದೇವರ); ಒಡ ಹುಟ್ಟಿದವನ ಹೆಣ್ಡತಿ (ಪ್ರಜಾವತಿ, etc.); ಗಣ್ಡನ ಒಡಹುಟ್ಟಿದವನ ಹೆಣ್ಡತಿ (ಯಾತೃ Nr.). ಅರಸಿನ ಹೆಣ್ಡತಿಯ ಒಡ ಹುಟ್ಟಿದವನು (ರಾಷ್ಟ್ರೀಯ Si. 65). ಒಡ ಹುಟ್ಟಿದವಳು (ಭಗಿನಿ, ಸ್ವಸೃ Nr.; J. 33, 14). ಒಡ ಹುಟ್ಟಿದವಳು (ಸಹಭವೆ Nn. 109). ಒಡ ಹುಟ್ಟಿದಳ್ (ಸ್ವಸೃ, etc. Mr. 314). ಒಡ ಹುಟ್ಟಿದವಳ ಗಣ್ಡನು (ಆವುಕ, etc.); ಗಣ್ಡನ ಒಡ ಹುಟ್ಟಿದವಳು (ನನಾನ್ದೃ, ನನ್ದಿನಿ); ತನ್ದೆಯ ಒಡ ಹುಟ್ಟಿದವಳ ಮಗನು (ಪೈತೃಷ್ವಸ್ರೀಯ); ತಾಯ್ಯ ಒಡ ಹುಟ್ಟಿದವಳ ಮಗನು (ಮಾತೃಷ್ವಸ್ರೀಯ Nr.). ಹೆಣ್ಡತಿಗೆ ಒಡ ಹುಟ್ಟಿದವರು (ಸ್ಯಾಲರು Si. 192). ಅಣ್ಣ ತಮ್ಮನ್ದಿರು ಒಡ ಹುಟ್ಟಿದವರು (B. 2, 40). ಒಡ ಹುಟ್ಟಿದವಳು ಸಿರಿ (Bp. 11, 46). ಒಡ ಹುಟ್ಟಿದಂ, an elder or a younger brother (J. 13, 64; 21, 17). — ಒಡಹುಟ್ಟು. 2. the state of being brothers and (or) sisters; a company of brothers and (or) sisters (My.; see Jōgihāḍu s. ಅನ್ತೆ s. ಅನ್ 1).

ಒಡ oḍa. 2. = ಒಡದು, ಒಡೆದು. a short P. p. of ಒಡೆ 1 (C.). — **ಒಡ ಕೊಳ್ಳು.** to break (v. i.); to separate from. ಸಾರಂಗವು ಅಂಜಿ, ಎದೆ ಒಡ ಕೊಣ್ಡು, ಗಿಡದ ಗುಪ್ಪಿನೊಳಗೆ ಹೊಕ್ಕು (B. 3, 19). ಒನ್ದನ್ನು ಒಡ ಕೊಣ್ಡು ಹೋಱ ಹೋಱಟದು (ಒನ್ದಱನ್ದ ಈಚಿಗೆ ಹೋಱಟದು, ಉದ್ವ್ರಾನ್ತ, ಉದ್ಗತ Si. 280). see Prv. s. ತಣ್ಡ.

ಒಡ oḍa. 3. = ಒಡೆ 3. the state of being broken, etc.; breaking. — **ಒಡಗಲ್ಲು. -ಕಲ್ಲು.** a hand-mill of stone or wood to remove the husk from paddy and to split pulse (My.). — **ಒಡಮೊಗೆ.** a broken or cracked earthen vessel (C.). ಮರ್ಮವಿಲ್ಲದ ಮಾತು ಒಡಮೊಗೆಯ ತೂತು (Dp. 54).

ಒಡ oḍa. 4. = ಒಡೆ 2. an abbreviated form of the infinitive of ಒಡೆ 1 (*i. e.* = ಒಡೆಯ, ಒಡೆಯಲ್ಕೆ). — **ಒಡ ಕುಟ್ಟು.** to beat so as to break, to beat into fragments, to pound (Bp. 45, 30; 52, 48; 55, 29. 34). — **ಒಡಗುಟ್ಟು. -ಕುಟ್ಟು.** = ಒಡ ಕುಟ್ಟು. ಒಡ ಗುಟ್ಟುವದು (ವಿದರ, ಸ್ಫುಟನ Si. 387). — **ಒಡಗೊಡು. -ಕೊಡು.** to throw away (from or out of the hand) so as to break (Bh. 8, 24, 44). — **ಒಡ ಮುರಕನ ಕಾಯಿ.** (ಲಕ್ಷ್ಮ G.). — **ಒಡ ಮುರಕೀ ಕಾಯಿ.** (ಯೋಗ್ಯ G.). — **ಒಡ ಮುರಿ.** to turn or twist round so as to break or open, as a tightly closed hand, etc. (C.). — **ಒಡ ಮುಱು.** = ಒಡೆ ಮುಱು. to bruise, to contuse (ನೀಷ್ಪೀಡನ G.).

ಒಡಂ oḍaṁ. 1. = ಒಡ 1, ಒಡನ್, ಒಡಮ್. union; together, in company, with; as soon as, when (T. ಉಡನ್); then. ಸಿರಿ ಒನ್ದು ಆಗದು; ಒಡವೇನೊ, ಸುಜನೋತ್ತಂಸಾ? (Śmd. 109, o. rs. -ವೇನೊ, ನೇನೊ). see ಅಲೊಡಂ.

-ಒಡಂ oḍaṁ. 2. a suffix signifying and, if etc. see s. -ಒಡೆ 4.

ಒಡಕ oḍaka. = ಒಡಕು, q. v. the state of being broken, cracked, disunited, etc.; a fracture; a crack; disunion; that breaks or goes to pieces. ಒನ್ದಾಗಿ ಇರುವವರಲ್ಲಿ ಒಡಕ ಹುಟ್ಟಿಸುವವನು (ದುರ್ಜನ G.; My.). see ಎದೆವೊಡಕ. — **ಒಡಕಗಡಿಗೆ.** a broken pot (ಓಡು G.; C.). ಮುಱಕಮನೆಗೆ ಒಡಕಗಡಿಗೆ (Prv.). — **ಒಡಕದನಿ.** a broken, *i. e.* disagreeable, voice (My.). — **ಒಡಕ ಬಾಯವ.** a man with a leaking mouth: one who cannot keep secrets (C.).

ಒಡಕಲ oḍakala. = ಒಡಕಲು. broken state; broken paddy or split pulse, from which the chaff, husk, etc. generally have not yet been separated (C.).

ಒಡಕಲು oḍakalu. = ಒಡಕಲ. (My.).

ಒಡಕು oḍaku. = ಒಡಕ. disunion, crack. (ಪ್ರದರ, ಭಂಗ Nr.; ವಿದರ, ಸ್ಫುಟನ, ಭಿದೆ Si. 387; My.). ತನ್ನ ಮಕ್ಕಳೊಳಗೆ ಹುಟ್ಟಿದ ಒಡಕು ಮುಱಿಯ ಬೇಕೆನ್ದು (B. 2, 30). ಮನೆತನದೊಳಗೆ ಒಡಕು ಹುಟ್ಟಿದನ್ತೆ (2, 41). — **ಒಡಕುಡೋಣಿ.** a boat with a hole. ಒಡಕು ಡೋಣಿಗೆ ಗಿಡ್ಡ ಜಲ್ಲು (Prv.). — **ಒಡಕುಹರವಿ.** a broken earthen vessel. ದಣ್ಡಿಗೆ ಅಂಜುವ ಬಣ್ಣನ್ ಒಡಕುಹರವಿಯ ಕಣ್ಣ (Dp. 54).

ಒಡತಣ oḍataṇa. = ಒಡೆತನ, ownership etc. [ಮನವೇ ಸರ್ಪ ತನುವೇ ಹೇಳಿಗೆ ಹಾವಿನೊಡತಣ ಹುದುವಾಳಿಗೆ! Bv. 160]; (Bp. 18, 5; 34, 30; 40, 30; 58, 43).

ಒಡತನ oḍatana. = ಒಡತಣ, ownership etc. (My.).

ಒಡತಿ oḍati. a female having ownership, power, etc., a mistress (Bp. 11, 21; 50, 8; My.).

ಒಡದು oḍadu. = ಒಡೆದು. P. p. of ಒಡೆ 1.

ಒಡನ್ oḍan. = ಒಡಂ 1, etc. — **ಒಡನಾಟ. -ಆಟ.** playing together: companionship, company, intercourse (J. 28, 24). ಬಲ್ಲವರ ಒಡನಾಟ ಬೆಲ್ಲವನು ಮೆದ್ದನ್ತೆ; ಅಲ್ಲದಹುದು ಎನ್ನು ಅಜಾಣನ ಒಡನಾಟ ಕಲ್ಲು ಹಾದನ್ತೆ (Sp.). ದುರ್ಜನರ ಕೂಡ ಒಡನಾಟ ಬಚ್ಚಲ ರೊಜ್ಜನನ್ತೆ ಇಹುದು (Sp.). ಕಳ್ಳನ ಒಡನಾಟವು ... ಕೆಸಱೊಳಗೆ ಮುಳ್ಳು ತುಱಿದನ್ತೆ (Sp.). ಅವನ ಒಡನಾಟವು ಎಲ್ಲರ ಮನಸಿಗೆ ಬರುತಿತ್ತು (B. 5, 183). 2, sexual intercourse (My.; see Prv. s. ಓದಾಟ). — **ಒಡನಾಡಿ. -ಆಡಿ.** a play-fellow; a companion; a friend; an equal (My., J. 23, 44). ನಿಡಿದೋಳ್ಗಳ್ ದಿಕ್ಕರಿಕರದ ಒಡನಾಡಿಗಳ್ ಎನಿಸಿ (Śmd. 117). [ತನ್ನೊಡನಾಡಿಯಪ್ಪ ಕೆಳೆಯಂ ದ್ರುಪದಂ ಛತ್ರಾವತಿಯೊಳರಸುಗೆಯ್ದಪನೆನ್ದು ಕೇಳ್ದು Pb. 2, 46 va.; Ap. 7, 126]; (Cpr. 5, 122). ಒಡನಾಡಿಯನ್ತೆ ತಾತ್ಪರಿಯಾನ್ತರಮ್ ಈವುದು (Mr. 6). ತನತನಗೆ ಗೋವಳರು ಮಲ್ಲರನ್ ಅನುಕರಿಸಿ ತಿವಿದಾಡುವರು, ಬಲ ದನುಜಹರರ ಒಡನಾಡಿಗಳು ತಾವಾಗಿ ವಿಪಿನದಲಿ (Bhāgavata 10, 18, 10). — **ಒಡನಾಡಿತನ. -ಆಡಿತನ.** companionship. friendship (My.; J. 6, 48). — **ಒಡನಾಡು. -ಆಡು.** to play with; to be in the company of, to associate with. ಮದಾಲಸರಾಜಹಂಸ ಮಣ್ಡಳಿಯೊಡನಾಡಿಯಾಡಿ, ನಡೆಗಲ್ತು (Śmd. 230). ಒಳ್ಳಿದ ಕಳ್ಳನೊಡನಾಡೆ ಅವ ಶುದ್ಧ ಕಳ್ಳನೇ ಅಕ್ಕು (Sp.). see Bp. 2, 42; 25, 3; 47, 39. 43; J. 5, 57. 58; 28, 22. — **ಒಡನಿರ್. -ಇರ್.** to be together with; to be in the company of. ಒಳ್ಳಿದರೊಡನಿರ್ದು, ಕಳ್ಳನ್ ಒಳ್ಳಿದನ್ ಅಕ್ಕು (Sp.). ನಿಮ್ಮೊಡನಿಪ್ಪಂ (Bp. 48, 25). see Rsv. 7, 97 va.; J. 21, 46. — **ಒಡನಿರಿಸು. -ಇರಿಸು.** to cause to be or to place in one's company (Bp. 25, 8). — **ಒಡನುಣ್. -ಉಣ್.** to eat together or in company (Bp. 24, 31; 45, 24). ಒಡನುಮ್ಬುದು (ಸಹಭೋಜನ Nr.). — **ಒಡನೆ. -ಎ 3.** (exactly) together with; together; with; forthwith, at the very time, immediately [ನುಡಿವಲ್ಲೆಯಲ್ಲದೇಂ ಕಲ್ಲೊಡನೋದುವುದಲ್ತೆ ಗಿಳಿಗಳುಂ ಪುರುಳಿಗಳುಂ Kr. 1, 10; Pb. 1, 45; Ap. 3, 58 va.; ಒಡನೆ ಹುಟ್ಟಿದುದಲ್ಲ, ಒಡನೆ ಬೆಳೆದುದಲ್ಲ Bv. 675]; (ಸಹ Śmd. 393; Ct. 1, 56; ಕೂಡೆ Śmd. 29. 61. 119 Cm.; T. ಉಡನ್ನೆ). ಒಡನೆ ಆರುಮ್ ಇಲ್ಲ (Śmd. 125). ನೀಮುಮ್ ಆಮುಮ್ ಒಡನೆ ಓದಿದೆವು (153). ಗಿಳಿಯೊಡನೋದಿಯೋದಿ, ನುಡಿಗಲ್ತು (230). ಓಸರಿಸಿದ ಜವನಿಕೆಯೊಡನೆ ಓಸರಿಸಿದನ್ ಅಲ್ತೆ ಕನ್ತು? (16). ಬಿರಯಿಗಳ ಸುಯ್ಗಳೊಡನೆಯೆ (119). ನಿನ್ನೊಡನೆ ಒನ್ದು ಭಾಗಮುಂ ಬರಿಪುದು! (275). ವೈರಮ್ ಇಕೆ ಎಮ್ಮೊಡನೆ? (Bp. 58, 34). ಚೋರನೊಡನೇ ದಾ... ನಡೆಯುವದ...

ಅದೇನು? (Dp. 167). ಒಡನೆ (forthwith) ಗೋಟುಟ್ಟು (J. 8, 40). ಒಡನೆ (immediately) ಕಳುಹಿಸಿ ಕೊಣ್ಡು (29, 40). ಒಡನೆ ಕಾಲನ್ ಅಡ್ಡಲು (Bp. 20, 13). see Bp. 32, 40; 47, 46; 57, 40; Bh. 1, 10, 26; 2, 13, 35. 48; J. 2, 66; 3, 8. 22; 4, 66; 26, 5; 28, 15. 20. 48; 29, 34; Śm. 7; Si. 262. 264; Dp. 148. [—ಒಡನಟ್ಟು. -ಅಟ್ಟು. to send forthwith. ಸಾದುಗೆತ್ತು ಬಗೆಯಾದವನಾನೊಡನಟ್ಟಿದೆನಾದವಮಾನುಮುಙಮಾನಿಸನಾಗವೆ Kr. 1, 128]. — ಒಡನೆ ಕೂಡು. to be in connection with, etc. (Śmd. 4. 23. 49. 71. 72. 299. 340. 343 Cm). ಅವನಾನೊಬ್ಬನು ಅತಿಶಯಮ್ ಅಹ ಪರಾಕ್ರಮದೊಡನೆ ಕೂಡಿದವನ್ ಉಣ್ಬ, ಅತನು ಊರ್ಜಸ್ವಿ ಎನಿಸುದು (Nr.). ಬೆಳುದಿಂಗಳೊಡನೆ ಕೂಡಿದ ಇರುಳು (ಜ್ಯೋತ್ಸ್ನಾ Nr.). — ಒಡನೆವೆರಸು. -ಬೆರಸು. = ಒಡನೆ ಕೂಡು. (Śmd. 340). — ಒಡನೊಡ. -ಒಡ. = ಒಡನೊಡನೆ. (Bp. 56, 29). — ಒಡನೊಡನೆ. rep. all at once, etc. [ದಿಗ್ಭಿತ್ತಿಗಳುಂ ಭೋಗ ಭೂಮಿಜರ ಚಿತ್ತಭಿತ್ತಿಗಳುಂ ಒಡನೊಡನೆ ಬೆಳಗೆ Ap. 6, 51 va.]; see Śmd. 272; Bp. 2. 21; 15, 5. 9; 27, 72; 47, 60; Rśv. 6, 33; J. 16, 36; 20, 30; 28, 47. — ಒಡನೊಡೆ. -ಒಡೆ. = ಒಡನೊಡ. (J. 3, 37).

ಒಡಬಾನಲ oḍabānala. Tbh. of ವಡವಾನಲ. submarine fire (ಕಡಲುರಿ, ಮುನ್ನೀರ್ಗಿಚ್ಚು Ct. II, 118; ಕಡಲ್ಗಿಚ್ಚು Śs.).

ಒಡವ್ oḍam. = ಒಡಂ 1, etc. union, etc. — ಒಡಮ್ಬಡಿಕೆ. -ಪಡಿಕೆ. = ಒಡಬಡಿಕೆ. (ಅಂಗೀಕಾರ, ಅಭ್ಯುಪಗಮ, ಪ್ರತಿಶ್ರವ, ಸಮಾಧಿ Nr.; C.). see Bp. 24, 28; 60, 60; B. 4, 19. 143; Si. 70. 263. 476. ಒಡಮ್ಬಡಿಕೆಯಿನ್ದ ಆಗುವದು ದಡಮ್ಬಡಿಕೆಯಿನ್ದ ಆದೀತೇ? (Prv.). — ಒಡಮ್ಬಡಿಸು. -ಪಡಿಸು. = ಒಡಬಡಿಸು. ಒಡಮ್ಬಡಿಸಿದರೆ ಒಡಲುರಿ ಹೋದೀತೇ? (Prv.). see Bp. 26, 61; 27, 51. 54; 41, 20; 53, 59; Rśv. 6, 11 va. & 132 va.; J. 5, 34; 16, 16; B. 5, 71. — ಒಡಮ್ಬಡಿಸುವಿಕೆ. -ಪಡಿಸುವಿಕೆ. causing to agree, etc. (Si. 470). — ಒಡಮ್ಬಡು. -ಪಡು. 1. = ಒಡಬಡು. (ಅಭ್ಯುಪಗಮ Śmd. Dh.; ಮೆಚ್ಚು 4 Cm.; ಕೆಯ್ಕೊಳ್ 95 Cm.). [ನುಡಿಗಳೊಡಮ್ಬಡಲ್ ಬಗೆದವೋಲ್ ಬಗೆಯಂ ಮಿಗಲೀಯದೊನ್ದೆ ನಾಣ್ಣಾಡಿಯ ಬೆಡಂಗೆ Kr. 1, 149; Pb. 5, 20; Ap. 1, 72]; (Cpr. 7, 77 va.) ಒಡಮ್ಬಟ್ಟು (283). ದೀರ್ಘಾದೇಶಮನ್ ಒಡಮ್ಬಡುವರ್ (142). ಮನಕ್ಕೆ ಬಾರದುದನ್ ಒಡಮ್ಬಡುವಲ್ಲಿ ಕಾಮುಮ್ ಎಮ್ಬ ಅನ್ವಯಂ ನೆಗಟ್ಟು (Nr.). ಲಂಚಕ್ಕೆ ಒಡಮ್ಬಟ್ಟು, ಒಪ್ಪಣಮುಂ ಕೊಣ್ಡು (Śś. 94). see Grj. 10, 99; Bp. 27, 50. 54; 40, 50; 45, 4; 58, 46; Rśv. 4, 76. 118; 19, 10 va.; Si. 265. 433; Ch. v. 203. 254. — ಒಡಮ್ಬಡು. -ಪಡು. 2. an agreement; a proof. ನುಡಿಗೆಲ್ಲಂ ಸಲ್ಲದ ಕನ್ನಡದೊಳ್ ಚತ್ತಾಣಮುಂ ಬೆದಣ್ಡೆಯುಂ ಎನ್ದು, ಈ ಗಡಿನ ನೆಗಟ್ಟಿಯ ಕಬ್ಬದೊಳ್ ಒಡಮ್ಬಡಂ ಮಾಡಿದರ್ ಪುರಾತನಕವಿಗಳ್ [Kr. 1, 32]; (Śmd. 121). [ಘೋರೆನ್ದು ಬರ್ಪೋನ್ದೊಡಮ್ಬಡು ಬನ್ದೆತ್ತಿಸಿದೊನ್ದು ಸತ್ತಿಗೆ ಕರಂ ನೆಯ್ತ್ತು Pb. 9, 104]. — ಒಡಮ್ಬಡುವಿಕೆ. -ಪಡುವಿಕೆ. = ಒಡಮ್ಬಡಿಕೆ. ಒಬ್ಬನು ಹೇಳುವ್ದನ್ನು ಒಡಮ್ಬಡುವಿಕೆ (ಆಂ, ಏನಂ Si. 475; see also 474).

ಒಡಮೆ oḍame. = ಒಡವೆ, ಒಡಿವೆ. that is: a thing, a substance; that one possesses: a possession, especially an ornament, a jewel; property, wealth (ದ್ಯುಮ್ನ, ದ್ರವ್ಯ, ದ್ರವಿಣ, etc. Hlā.; Abh. P. 6, 35; Cpr. 5, 86 va.; My.; Te.; M. ಉಡಮೆ; T. ಉಡೈಮೈ; see ಒಡೆ 6 & ಉಳ್ 1). [ನೀಮಿಂತಙಯುತ್ತುಂ ಪೆಱರೊಡಮೆಯನುಱ್ ಸೆಱೆವಿಡಿದಿರ್ಪಿರಿನ್ನುರ್ವಿಯೊಳೊಳರೇ Pb. 8, 18; Ap. 7, 45]; ಅಕುಪ್ಯಮ್ ಎಮ್ಬುದು ಹೊನ್ನು ಬೆಳ್ಳಿಯುಂ; ಉಙದ ಒಡಮೆ ಕುಪ್ಯಮ್ ಎಮ್ಬುದು (Hlā.). ಕಳ್ದೊಡಮೆ (ಅಪಹೃತ, ಲೋಪ್ತ್ರ Hlā.) see ಉಳ್ದೊಡಮೆ.

ಒಡಮ್ಬಿ oḍambi. ಒಡಮ್ಬೆ oḍambe. the body (ಶರೀರ Śmd. II; T., M. ಉಡಮ್ಬು; *cf.* ಒಡಲ್). ಪೋದ ಒಡಮ್ಬೆ ಪಿಳ್ಕಾದುದು (Śmd. 289).

ಒಡರ್ oḍar. ಒಡರು oḍaru. = ಒಡರ್ಚು, etc. Pp. ಒಡರ್ದು [ಬಲ್ಲಡಿಗರ್ ವನ್ದಿರ್ದರ್ಯೆವರಾಲದ ಕೆಳಗಿನ್ತೊಡರ್ದರ್ Pb. 3, 12]; (J. 17, 32). ಪ್ರಣಯಕಲಹವನ್ ಒಡರಿ (Bp. 42, 14). ಒಡರ್ಪುದು (J. 2, 31).

ಒಡರಿಚು oḍaricu. = ಒಡರಿಸು, ಒಡರ್, ಒಡರ್ಚು. (J. 2, 46; Abhā. 2, 85). ಒಡರಿಚುವದು ಏಂ ಕೇಳಿಕೆಯನ್ ಈ ನರ್ತನೋಚಿತಕೆ (Bp. 19, 42). ಕಮಳ ಮುತ್ತುಂಗಳಂ ನಿಜಕರದಿನ್ ಏಕೋದಕದೊಳ್ ಒಡರಿಚಿ ಪಿರಿಯ ಗಾಣವನ್ ಇಕ್ಕುವ ಆ ಬಲೆಗಾಱಂ (21, 28). ಅನ್ದುಗೆಯನ್ ಎಡದ ಅಡಿಯೊಳ್ ಒಡರಿಚಿ (29, 3).

ಒಡರಿಸು oḍarisu. = ಒಡರಿಚು, etc. (ಬರ್ Śmd. 198 Cm.). ಮುನ್ದು ಪಿನ್ದುಗಳ ಅನ್ತ್ಯಕ್ಕೆ ಒಡರಿಸುಗುಂ ಲೋಪಂ (198). ನಡೆದುದೆ ಮಾರ್ಗಂ, ಪದವಿಡಲ್ ಒಡರಿಸಿದುದೆ! (407). ಒಡರಿಸಿದನ್ ಅಭಿನವ ನಿಗಣ್ಟನ್ ಅಭಿನವಮಂಗಂ (Mr. 6). [ತಡೆಯದೆ ಮಹಾಧ್ವಕೃತಿಗಳನೊಡರಿಸಲಾರ್ಪಾತನಲ್ಲರಿನ್ದಂ ಬಲ್ಲಂ Kr. 1, 16; Pb. 9, 78; ಬೆಡಂಗೊಡರಿಪವಕ್ಷಾರಾದ್ರಿಗೆ ಪಡುವಣದದು ಸುಜನನಿಳಯಮುಪಗತವಿಳಯಂ Ap. 1, 56]; see Cpr. 8, 79 va.; Abh. P. 4, 26; 7, 14; 9, 70; 10, 156; 14, 122 va.

ಒಡರ್ಚಿಸು oḍarcisu. = ಒಡರ್ಚು. to undertake, to begin. ಅರಸನುಮ್ ಅರಸಿಯುಂ ನೆತ್ತವನ್ ಒಡರ್ಚಿಸಿ (Bp. 43, 2).

ಒಡರ್ಚು oḍarcu. = ಒಡರಿಚು, etc. to join (v. t.); to put to (or in). 2, to cause oneself to come in connection with, to join (v. i.). 3, to enter into, to engage in, to undertake, to begin; to do, to perform; to cause, to produce; to endeavour, to try, to make effort (ಉದ್ಯಮ Śmd. Dh.; ಮಾಡು Ct. II, 39; Te. ಒನರ್ಚು; for T., M. ಉಙಱು, to exert, be strenuous, *cf.* ಉಜ್ಜು). ಜನೋದಯಂಗೆ ಇದಂ ಪೇೞಲ್ ಒಡರ್ಚಿದೆಂ (Śmd. 255). [ಹಮ್ಪನ ಪೇೞ್ಗುಮೆನ್ದು ಪಣ್ಡಿತರೆ ತಗುಬ್ದು ಬಿಚ್ಚಱಸೆ ಪೇೞಲೊಡರ್ಚಿದೆನೀ ಪ್ರಬನ್ಧಮಂ Pb. 1, 11]; see Cpr. 6, 80.; Ch. v. 16; Abh. P. 3, 47. 49; 9, 30. 186; 14, 143; Bp. 1, 64; 3, 43; 21, 45; 35, 6; 50, 25. 32; 51, 73; Grj. 9, 2; Rśv. 5, 32; 6, 11 va. (twice); 6, 24 va.; 6, 33; 8, 5; 13, 83; V. 14, 109; J. 3, 31; 24, 11; 28, 45; 31, 23.

ಒಡಲ್ oḍal. = ಒಡಮ್ಬಿ, ಒಡಲು. the body (ಶರೀರ Nr.; ಮೆಯ್, ಡೊಕ್ಕೆ Śm. 71; ಕೋಷ್ಠ Hlā.; T., M., Tu. ಉಡಲ್; Te. ಒಡಲು, ಒಳ್ಳು, ಪಳ್ಳು). [ಮುನಿದೊಳ್ ಸೋಲ್ತು ಮುನೀನ್ದ್ರನಾಕೆಯೊಡಲೀ ದುರ್ಗನ್ಧ ಪೋಪನ್ನೆ ಯೋಜನಗನ್ಧಿತ್ವಮುನಿತ್ತು Pb. 1, 69; Ap. 9, 89]. the belly, the stomach (C. as ಒಡಲು; Tu.). ಒಡಲ ಎಲ್ಬು (ಕಂಕಾಲ Hlā.). ಒಡಲ ಎಲು (ಅಸ್ಥಿ, etc. Mr. 397). ಕಿಱಿಯ ಒಡಲವನು (ಪೃಶ್ನಿ, ಕಿರಾತ Hlā.). ಒಡಲ ಎಡಭಾಗವು (ಸವ್ಯ Nr.). ತನ್ನ ಒಡಲ ಹೊರೆವಾತನು (ಆತ್ಮಮ್ಭರಿ, ಕುಕ್ಷಿಮ್ಭರಿ Nr.). see Bp. 6, 25; 8, 22; 20, 12; 26, 43; 44, 14; 46, 58; 59 sum.; 59, 10; 60, 58; Bh. 1, 8, 61; Rśv. 5, 117; 9, 18; J. 2, 15; 4, 36; 28, 29. 40. 46. 48. 55. — ಒಡಲ. -ಅ 3. a man who has a body. see ಕಾರೊಡಲ, ಕೇಸೊಡಲ. — ಒಡಲ್ಗೊಡು. -ಕೊಡು. to present the body (Cpr. 4, 47).

ಒಡಲಿಚ oḍal-ica. the body-born: Kāma (ಮನ್ಮಥ Śm. 7). (Śmd. 236).

ಒಡಲು oḍalu. = ಒಡಲ್. (C.). ಹಾವಿನ ಒಡಲು (ಭೋಗ Hlā.). ಜ್ಞಾನವುಳ್ಳವನ ಒಡಲು ಭಾನುವಿನ ತೇಜಿನ್ ಇಹುದು, ಜ್ಞಾನವಿಲ್ಲದನ ಕಾಯವು ಹಾಱೂರ ಸ್ಥಾನದಿಂ ಕಡೆಯೆ (Sp.). see Bp. 27, 15; 44, 26. 29; J. 31, 55. — ಒಡಲುಗೊಳ್. -ಕೊಳ್. to assume a body, to become incorporated (Bp. 18, 88; 58, 48). — ಒಡಲುರಿ. -ಉರಿ. burning or pain of the belly; internal heat, grief (J. 23, 60; 30, 35). ಒಡ

ಉರಿ ಒನ್ದು ಕಡೆ, ಬ್ರಹ್ಮೇತೀ ಕಾಟ ಒನ್ದು ಕಡೆ (Prv.). see Prv. s. ಒಡ ನ್ಪಡಿಸು.

ಒಡವೆ oḍave. = ಒಡವೆ, etc. a possession, an ornament etc. (C.; Tu.; ಅಲಂಕಾರ, ಆಭರಣ Si. 217). ಸ್ತ್ರೀಯರ ಒಡವೆ (ಶುಲ್ಕ, ಸ್ತ್ರೀಸಮ್ಬನ್ಧದ ದ್ರವ್ಯ Nn. 125). ಪರರ ಒಡವೆಯನ್ ಅಪಹರಿಸು ವದು (ಪರವಸ್ತುಸ್ವಾಪಹ 151). ಕಳವಿನ್ದಾದ ಒಡವೆ (ಲೋಪ್ತ್ರ); ಅತಿಥಿಗೋ ಸ್ಕರ ಇರ್ದ ಒಡವೆಯಲ್ಲಿಯುಮ್ ಆತಂಗೆ ತಕ್ಕ ಒಡವೆಯಲ್ಲಿಯುಮ್ ಆತಿಥ್ಯ ಎನಿಸುಗು (Nr.). ಕಳವಿನೊಡನೆ (ಅಪಹೃತ Mr. 226). ಕೊಟ್ಟೊಡವೆ (ವಿಗ್ರಹ Mr. 474). ಕೊಮ್ಬ ಒಡವೆ (ಕಪ್ಪ 267). see Bp. 4, 65; 31, 10; 44, 63; 45, 20; J. 16, 46; 31, 28; Dp. 148; B. 3, 27; 4, 148; Si. 218; Prv. s. ಬಂಗಾರ. — ಒಡವೆಗೇಡು. -ಕೇಡು. loss of property. ಒಕ್ಕಲಿ ಗನ ನೆಣ್ಬು ಒಡವೆಗೇಡು (Prv.).

ಒಡಸು oḍasu. = ಒಡಿಸು, ಒಡೆಸು. to cause to break, etc. (C.).

ಒಡಿ oḍi. 1. (probably = ಉಡಿ 5, etc.). the waist, in ಒಡ್ಯಾಣ.

ಒಡಿ oḍi. 2. = ಉಡಿ 1. q. v., etc. to be broken, to come apart or to pieces, to crack, to burst, to chap (C.); to break forth, as a bud, a leaf (C.); to bud, as a tree (My.); to separate from, to leave; to turn, as milk (C.); to become weakened, to fail, as courage (C.); to take a side-course, to branch off, as a branch, a road (C.). 2, to break (v. t.), etc. (C.; Tu., M., T.; T. also ಒಚಿ). see B. 2, 3; 3, 82; 4, 54; 5, 128. 243; Si. 200. Prv. s. ಶೈಲ್ಯ.

ಒಡಿ oḍi. 3. to flow in a small, gentle stream, to trickle through, to ooze, as water through banks, as the spring (sele) of a well (C.; Te. ಒಡಿ, ವಡಿ; T. ವಡಿ; M. ಒಚಿ; see ಉಗು 1, ಒಟ್ಕು 1, ಬಸಿ 1); to run and cause blots, as ink (C.; B. 1, 22). — ಒಡಿಗಟ್ಟು. *i. e.* ಒಡಿಯ ಕಟ್ಟು. to strain off, to filter through a cloth (My.; Te. ಒಡಿಯ ಕಟ್ಟು, ಒಡಕಟ್ಟು; T. ವಡಿಕಟ್ಟು).

ಒಡಿ oḍi. 4. = ವಡಿ. heat (Si.; Te. ವಡೆ).

ಒಡಿವೆ oḍive. = ಒಡವೆ, etc. (C.; ಅರ್ಥ G.). see Si. 68. 243. 324. 330. 331. 413. 439; B. 5, 27.

ಒಡಿಸು oḍisu. = ಉಡಿಸು 1, ಒಡಸು, etc. (C.; B. 5, 54).

ಒಡಿಸೆ oḍise. = ಉಡಚು, ಒಡುಚು. a bubo (R.; Te. ಒಡಿ ಸೆ, ವಡಿಸೆ).

ಒಡುಚು oḍucu. = ಉಡಚು. a venerial boil in the iliac region. (Sd.).

ಒಡೆ oḍe. 1. = ಒಡಿ 2, etc. to be broken, etc. (ಸ್ಫೋಟನ Śmd. Dh.; C.). [ಬಡಿಯೊಳ್ ನಿಜತನಯನ ತಲೆಯೊಡೆವಿನೆಗಂ ಬಡಿದ ಕಾರಣಂ ಕೊಣ್ಡುಯ್ದರ್ Ap. 5, 20; Pb. 7, 13]. P. ps. ಒಡ 2, ಒಡದು, ಒಡೆದು. ಒಡವುತ್ತಂ (Abh. P. 14, 89). ಒಡೆಯಲ್ ಪಟ್ಟುದು (ದಾರಿತ, ಭಿನ್ನ, ಭೇದಿತ Nr.). ಕಾಯ್ದು ಬಿಸಿಯಾಗಿರ್ದ ಹಾಲಿನಲ್ಲಿ ಅವುದಾನೊನ್ದು ಮೊಸರ ಹೊಯ್ದುದಚಿತ್ತೆನ್ದ ಒಡೆದುದು (ಆಮಿಕ್ಷೆ, ಒಡೆ Nr.; see Si. 240). ಹಿಳ್ಳಿ ಒಡೆದು ಬೆಳೆದ ತೃಣಧಾನ್ಯಂಗಳು (ಗುಲ್ಮ Nr.). ಒಡದುದು (ವಿಶೀರ್ಣ, ಜರ್ಝರ Nn. 41). ಒಡೆದುದು (ವಿಶೀರ್ಣ 96). ಒಡದು ಹೋಗುವದು (ವಿದರ, ಸ್ಫುಟನ, ಭಿದೆ Si. 387). ಹಿಣ್ಡನ್ ಒಡೆದ ಎಕ್ಕಲಂ (Rāghc. 17, 72). ಕಲ್ಲು ಒಡೆಯುವ ಉಳಿ (ಪಾಷಾಣದಾರಣ G.). ಕಾಲ ಹಿಮ್ಮಡು ಒಡೆಯುವ ರೋಗ (ವಿಪಾದಿಕೆ G.). ಬುಡದಲ್ಲಿಯೇ ಟೊಂಗಿಗಳು ಒಡೆಯುವ ಗಿಡ (ಸ್ತಮ್ಬ G.). see Śmd. 153. 221. 255; Bp. 14, 8; 22, 7; 23, 25; 35, 49; 38, 32; 44, 27; 45, 27; 50, 79; 51, 81; 52, 23; 53, 26; 55. 28; 57, 59; Bh. 1, 20, 57; 3, 13, 25. 31. 32; 6, 2, 2; Rśv. 5, 41. 121; 9. 22; J. 6, 6; 14, 5; 22, 3; 28, 17; B. 3, 82; 4, 178; Prvs. s. ಬಣ್ಣ 2, ಮಂಜಿ 1. — ಒಡೆಯ ಹೊಯ್. to bruise, to crush, to shatter to pieces (Bp. 24, 56). — ಒಡೆಯಿಕ್ಕು. -ಇಕ್ಕು. to break. to bruise, to pound. (Cpr. 5, 41 va.); [ತ್ರಾಸಿನ ಕಟ್ಟೆಳೆಯನ್ನಿನಿತು ನೆಗ್ಗಳ ವಾದರೆ ಈಶ್ವರನೊಡೆಯಿಕ್ಕದೆ ಮಾಣುವನೆ Bv. 804]. (My.; Si. 302. 306). — ಒಡೆಯಿಡು. -ಇಡು. = ಒಡೆಯಿಕ್ಕು. ಪುಲಿಯ ತಲೆಯ ಒಡೆಯಿಟ್ಟು (Rāghc. 17, 70). — ಒಡೆಯಿಸು. -ಇಸು. to shoot to pieces (J. 13, 34).

ಒಡೆ oḍe. 2. = ಒಡ 4. — ಒಡೆಗಲಸು. -ಕಲಸು. 1. to break and make a medley of, to destroy (Bh. 6, 2, 2). — ಒಡೆಗಲಸು. -ಕಲ ಸು. 2. a broken, confused mass (Bh. 2, 2, 78). — ಒಡೆತುಚು. to crush by trampling on (Bh. 5, 3, 83). — ಒಡೆಬಡಿ. to bruise, to crush, to shatter to pieces (Bp. 49, 46; 57, 37). — ಒಡೆ ಮುಚು. = ಒಡ-. (Bh. 2, 2, 97; J. 15, 32). — ಒಡೆ ಸೀಳ್. to split (a thing) so that it is reduced to fragments (Bp. 21, 43; 22, 16; 34, 34). — ಒಡೆಹಾಯ್. to pass over so as to crush (Bh. 5, 3, 104).

ಒಡೆ oḍe. 3. = ಉಡಿ 2, ಒಡ 3 q. v. a fragment (ಸ್ಫೋಟನ ದ್ರವ್ಯ Śmd. Dh.; Bh. 4, 2, 66). 2, coagulated, turned milk (see Nr. s. ಒಡೆ 1). — ಒಡೆಯೇಚ್. -ಏಚ್. fractures to arise or be produced (J. 3, 21).

-ಒಡೆ oḍe. 4. = -ಅಡೆ 1, etc. if (ಪಕ್ಷ Śmd. 297); when; to. ಸೀನ್ ಉಳ್ಳೊಡೆ ಉಣ್ಬ ರಾಜ್ಯಂ (155). ಕಾದುವೊಡೆ ಒರ್ವನೆ ಬಲ್ಲಿದಂ. ತಿರ್ದುವೊಡೆ ಅವರ್ ಬಳ್ಳಿದರ್. ಚಿತ್ರಿಪೊಡೆ ತೂಳಿಕೆಯಂ ತರಿಸುವಂ (297. 298). see Śmd. 75. 136. 176. 388. 393; Bp. 2, 49; 46, 19; 50, 3; 51, 75; 52, 30. 31; 53, 13. 45; 54, 28. 58; 58, 38; Śm. 5. 51; Rśv. 13, 97; J. 19, 7; 28, 14. 48. 58; 30, 51. — ಒಡಂ. -ಅಂ 5. and, if etc. see -ಅಂ 5, Nos. 6 & 7; Śmd. 13. 83. 84. 85. 87. 101. 164. 251; J. 28, 57.

ಒಡೆ oḍe. 5. = ಒಡ 1. union, together etc. — ಒಡೆವೆರಸು. -ಬೆರಸು. = ಒಡವೆರಸು. (V. 23, 11; J. 9, 15). — ಒಡೆವೆರೆ. -ಬೆರೆ. = ಒಡ ವೆರೆ. (V. 23, 18).

ಒಡೆ oḍe. 6. possession, ownership; lordship (T. ಉಡೈ; M. ಉಡೆ, belonging to; see ಒಡವೆ).

ಒಡೆಗಾಱಳು oḍe-gāṟaḷu. a mistress (My.).

ಒಡೆಗಾರ್ತಿ oḍe-gārti. = ಒಡೆಗಾಱಳು. (My.).

ಒಡೆತನ oḍetana. = ಒಡತಣ, ಒಡತನ, ಒಡೆಯತನ. ownership; lordship; rule, dominion, sway, sovereign power; superintendence (ವಶಾಳಿ, ಅಧ್ಯಕ್ಷತೆ Nn. 101; C.; J. 11, 34). ಪೊಡವಿಯ ಒಡೆತನ ಸಲ್ಲದನರನು (ಅಡವಿಗೆ) ನಡಸುವುದು ಕಾಲ ವಶಿ! (Bh. 1, 8, 23). ಕೊಡುವೆಂ ಶ್ರೀಲಸದಮಾತ್ಯಾದಿಸಕಲನಿಯೋ ಗದ ಒಡೆತನವ (Bp. 5, 55). ಇನ್ನು ಒಪ್ಪದು ಈ ಭಣ್ಡಾರದ ಒಡೆತನ ಮುಂ ಪ್ರಧಾನಿಕೆಯುಂ (11, 7).

***ಒಡೆಯ oḍeya. 1.** having, containing. ಪಸಿವು ನೀರಟ್ಟೆ ಮೊದಲಾಗೊಡೆಯ ಇಪ್ಪತ್ತೆರಡು ಪರೀಷಹಂಗಳುಮುಂ Vr. 11, 24.

ಒಡೆಯ oḍe-a. 2. a man who possesses or has, an owner (ಉಳ್ಳ, ವನ್ತ Śmd. 241. 73); a lord, a master; a chief, a leader; a ruler; a king (ಅರ್ಯ, ಪರಿವೃಢ, ಸ್ವಾಮಿ, ಪ್ರಭು, ನೇತೃ, ನಾಯಕ, ಅಧಿಭು, ಅಧಿಪ, ಅಧೀಶ, ಅಧಿಪತಿ Nr.; ಸ್ವಾಮಿ, ಈಶ್ವರ, ಪತಿ, etc. Nr.; ಸ್ವಾಮಿ, etc., ಆಳುವವನು Si. 355; ಸ್ವಾಮಿ, ಪತಿ. ನಾಯಕ, etc. Mr. 227; ಸ್ವಾಮಿ Bhn. 19; ಕಾನ್ತ. ಪತಿ Nn. 91; ಪರಿ ವೃಢ 161; ಭುಜನೂನ, ಕರ್ತ, ಸ್ವಾಮಿ G.; C.; Tu. ಒಡಂಯಿ. ಒಡೆಯ;

Te. ಒಡಯ; M. ಉಡಯವನ್, ಉಡಯಾನ್; T. ಉಡ್ಯೆಯವನ್, ಉಡ್ಯೆಯಾನ್; see s. ಒಡನೆ). [ಎಮ್ಮ ವಂಶಗಳ್ಗೆ ಪುಟ್ಟಿದಾತಂ ರಾಜ್ಯಕ್ಕೊಡೆಯನುಂ ಪಿರಿಯ ಮಗನುಂ ಕ್ರಮುಕ್ಕರ್ಹನುಮಪ್ಪೊಡೆ ಕುಡುವೆಮೆನೆ Pb. 1, 70 va.; Ap. 4, 27]. ಊರೊಡೆಯಂ (Śmd. 161). ಪೆರ್ಮೆಯೊಡೆಯಂ, ಜಗದೊಡೆಯಂ, ನೆಲನೊಡೆಯಂ, ಕೊಡೆಯೊಡೆಯಂ, ಜಾಹೊಡೆಯಂ (242). ನಾಡೊಡೆಯಂ or ನಾಡಿಕ್ಕೊಡೆಯಂ; ಕೊಡೆಯೊಡೆಯಂ or ಕೊಡೆಗೊಡೆಯಂ (167). ಲೇಸಿಂಗೊಡೆಯಂ (63). ಒಡೆಯಂಗೆ ಅತಿಹಿತರ್ ಆರ್? (177; see also 39. 345). ಇನ್ದ್ರ, ಅನಲ, ಯಮ, etc. ಈ ಎಣ್ಟು ಮೂಡಲು ಮೊದಲಾದ ಎಣ್ಟುದೆಸೆಗಂ ಕ್ರಮದಿನ್ದೆ ಒಡೆಯರು (Hlā.). ಸೇನೆಗೊಡೆಯನು (ಸೇನಾನಿ); ಹಟ್ಟಿಗೊಡೆಯನು (ಗೋಪ); ಆನೆಗಳ ಮೊತ್ತಕ್ಕೆ ಒಡೆಯನಾಗಿದ್ದ ಆನೆ (ಯೂಥನಾಥ Nr.). ದೇವರು ದಯಾಭರಿತನಾದ ಒಡೆಯನು (B. 4, 143). frequently the honorific plural of ಒಡೆಯ is used as ಒಡೆಯರ್, ಒಡೆಯರು, ಒಡೆಯರುಗಳ್. see Bp. 4, 12; 10, 44; 14, 6. 19; 18, 6; 21, 11. 41; 22, 61; 24, 33; 25, 17; 27, 72; 40, 38; 43, 71; 44, 6; 45, 11; 46, 21; 47, 9. 20; 52, 33. 49; 53, 63; 54, 6; 57, 26. 62; 60, 60; ಮೂಜಗದೊಡೆಯ; Bh. 1, 8, 86; 2, 4, 6; Mr. 6; J. 2, 34; 11, 31; 28, 27; 29, 16. 33. ಒಡೆಯ ಬನ್ದರೂ ಒಡೆದ ಪಾತ್ರೆ ಕೂಡಲಿಲ್ಲ. — ಒಡೆಯನ ಕಣ್ಣರೂ ಬಡತನ ಹೋಗಲಿಲ್ಲ. — ತೊಡೆ ಸೋಕಿದ ನಾಯಿ ಒಡೆಯನ ಗುಟ್ಟಾತ ಅರಿಯದು (Prvs.; see Prv. s. ವಡೆ). — ಒಡೆಯ ಪಿಳ್ಳೆ. N. (Bp. 43, 49). — ಒಡೆಯರುಗಳೊಡೆಯ. the lord of lords (Bp. 23, 13). — ಒಡೆಯರೊಡೆಯ. the lord of lords (Bp. 44, 63).

ಒಡೆಯತನ oḍeyatana. = ಒಡೆತನ. ownership. (ಆಳ್ತನ, ಕಟ್ಟಾಳುತನ, ಶೃಂಗ, ಸ್ವಾಮ್ಯ G.; My.).

ಒಡೆಸು oḍesu. = ಒಡಸು, etc. to cause to break. (My.).

ಒಡ್ಡ oḍḍa. 1. a class of people who cut stones from the earth, convey them on their carts to where they are wanted, dig tanks and wells, etc. (C.; B. 4, 151). they speak a Telugu patois, and in S. Mhr. occasionally say they are followers of a deity at Sollāpura, called Sidharāmēśvara. (Te. ಒಡ್ಡೆ, drudgery; ಒಡ್ಡೆವಾಣ್ಡ್ಲು, tank diggers, labourers, pitmen; ಒಡ್ಡೆದೇಶ. = ಓಡ್ರದೇಶ; T. ಒಟ್ಟರ್, tank diggers, inhabitants of ಒಟ್ಟಿಯ, a country to the north of Madras). ಒಡ್ಡರಲ್ಲಿ ದಡ್ಡನಾಗಬಾರದು (Prv.). see Prv. s. ತಱುಬು 2. 2, a man who can do only rough work (My.).

ಒಡ್ಡ oḍḍa. 2. = ಒಡ್ಡು 4. a pile, a heap (T. ಒಟ್ಟು). 2, a stake in gambling, a wager, a bet (ನೀವಿ, ಪರಿಪಣ Hlā.; ಪಣ Nr.; T. M. ಒಟ್ಟು, Te., ಒಡ್ಡು; see ಒಟ್ಟು 3, ಒಡ್ಡು 1). [ನಾಟವಾಸಗೆಗಳನರಸಾಳನ್ತೆ ಕಣ್ಣಱದು ಮೆಟ್ಟೆ ಒಟ್ಟಮಱದಿಕ್ಕುವಾಗಳೊಡ್ಡಮಂ ಪೇಱಮೆನೆ Pb. 6, 71 va.; ಪೀಲೊಡ್ಡವಾಯಿತ್ತೆನ್ನು... ನೀನಿಕ್ಕಿದ ಜೂಜಿಂಗೆ ಹೊಯಿದು ಗೆದ್ದ ಸಿರಿಯಾಳ Bv. 679]. 3, a host, an army (ಪೌಜು Ct. II, 38). ಜೂಜಿನಲ್ಲಿಯ ಒಡ್ಡವು (ಗ್ಲಹ Nr.). ಜೂದಿನ ಒಡ್ಡದಲ್ಲಿ ದರೋದರ ಎನಿಸುಗು (Nr.). see Bh. 2, 13, 46. 48.

ಒಡ್ಡಣ oḍḍaṇa. 1. = ಒಡ್ಡಣೆ. a pile, a mass (Rśv. 6, 5. 54); an assembly; an army [ನೆಱೆದು ಸಮಱದ ಮದನನೊಡ್ಡಣದನ್ತೆ ಸಮಱದ ಪುರ್ಬು Ap. 4, 41 va.; Pb. 10, 53; Vr. 148, 5]. see ಇದಿರೊಡ್ಡಣ.

ಒಡ್ಡಣ oḍḍaṇa. 2. = ಒಡ್ಯಾಣ. a zone or belt of gold or silver. (My.; Te.).

ಒಡ್ಡಣೆ oḍḍaṇe. = ಒಡ್ಡಣ 1. (V. 28, 73). ಭಟ್ಟರ ಒಡ್ಡಣೆ (Bh. 6, 2, 5).

ಒಡ್ಡತಿ oḍḍati. a woman of the Oḍḍas (C.).

ಒಡ್ಡನ್ತಿ oḍḍanti. Tbh. of ವರ್ಧನ್ತಿ, q. v. (My.). a natal festivity. ಒಡ್ಡನ್ತಿ ಮಾಡಿದರೆ ಹೆಡ್ಡತನ ಹೋದೀತೇ? (Prv.).

ಒಡ್ಡಯಿಸು oḍḍayisu. to counteract, to hinder, to defeat (Bh. 8, 23, 6).

ಒಡ್ಡವ oḍḍava. arrangement (of words), style (Bh. 1, 1, 9).

ಒಡ್ಡವಣೆ oḍḍavaṇe. array; preparation (ಸನ್ನಾಹ Bhn. 10; Bh. 2, 7, 21; J. 13, 9).

ಒಡ್ಡವಾಣ oḍḍavāṇa. = ಒಡ್ಯಾಣ, etc. (My.; Te. ಒಡ್ಡಾಣ).

ಒಡ್ಡಿ oḍḍi. 1. (fr. ಒಡ್ಡ 1). relating to the Oḍḍas: their country, Orissa. — ಒಡ್ಡಿಜಗನ್ನಾಥ. Krisṇa's idol at Orissa (My.). — ಒಡ್ಡಿಯ. -ಅ 3. an Orissa man (Bh. 2, 4, 11).

ಒಡ್ಡಿ oḍḍi. 2. = ಉಡ್ಡಿ, ಒಡ್ಡು 4. a heap or pile. (S. Mhr.). ಜೂಜಿನ ಒಡ್ಡಿ (ಗ್ಲಹ Hlā.). — ಒಡ್ಡಿಗಱುಗ. = ಉಡ್ಡಿಗಱುಗ. (S. Mhr.).

ಒಡ್ಡಿಕೆ oḍḍike. putting; piling (My.).

ಒಡ್ಡಿವಾಣ oḍḍivāṇa. = ಒಡ್ಯಾಣ, etc. (My.; T. ಒಟ್ಟಿಯಾಣ).

ಒಡ್ಡಿಸು oḍḍisu. to cause to put, etc. (My.).

ಒಡ್ಡು oḍḍu. 1. (fr. ಉಱು). to place, to put, to lay; to put towards, to present, to expose; to hold (the hands, etc.) so as to receive, catch, or support a thing; to fix, to set; to array; to put a stake or as a stake at play (C.; Te., Tu.; T. ಒಣ್ಡು, to lean against; to approach). [ಅಂಗಂಗಳನೊಡ್ಡಿಯೊಡ್ಡಿ ತನುವಂ ಕೊಟ್ಟನ್ತು Pb. 4, 26; Ap. 2, 47; ಧನಕ್ಕೆ ಮನವನೊಡ್ಡಿದರೇನು Bv. 216]. ಕೆಲಸಕ್ಕೆ ಮೈಯೊಡ್ಡುವವನು (ದಕ್ಷ, ಚತುರ, ಪೇಶಲ, etc. Nr.). ಬಿಸುನೆತ್ತರ ಧಾರೆಗೆ ಬಾಯನೊಡ್ಡಿ (Śmd. 216). ಮುಷ್ಟಿಯಿಂ ಮುಷ್ಟಿಯಿಂ ಮೆಯ್ಯೊಡ್ಡಿ ಮಾಡುವ ಯುದ್ಧಂ (219). ಕಾಳೆಗಕ್ಕೆ ಒಡ್ಡಿದ ಸೇನೆ (ವ್ಯೂಹರಿ ಇರ್ದ ಸೇನೆ, ಸನ್ನಾಹ Nn. 105). ಒಡ್ಡಿದಲ್ಲಿ ನೀವಿ, ಪಣ ಎನಿಸುಗು (105). ಸತಿಯ ಕಂಗಳೊ? ಒಡ್ಡಿದ ಉರುಳುಗಳೊ? (Bp. 40, 4). ಹಱುವ ಗರಗಸಿನಲ್ಲಿ ಶಿರವನೊಡ್ಡಲು ಬಹುದು (Dp. 172). ಭೂಪತಿಲಕ ಸಿಲುಕಿದನ್ ಅವದಿರ್ ಒಡ್ಡಿದ ಬಲೆಗೆ (Bh. 2, 13, 45). ನಾಯಂ ಕರೆವುತ, ಒಡನೆ ಕಾಲನ್ ಅಡ್ಡಲು ಒಡ್ಡಿ (Bp. 20, 13). ತೆಳುವೆಲರ್ಗೆ ಮೆಯ್ಯೊಡ್ಡಿ, ಮಾರ್ಗಶ್ರಮವನು ಕಳೆದರ್ ಅಧ್ವಗರ್ (J. 8, 5). ತಂಗಾಳಿಗೆ ಒಡ್ಡಿದ ಮೆಯ್ (30, 19). ಕೌರವಭೂಪತಿ ಒಡ್ಡಿದನು ಧರ್ಮಜ ಹೆಸರಿಸಿದ ಧನವ (Bh. 2, 13, 49). ಅರಮನೇ ತುಪ್ಪಕ್ಕೆ ಸೆಱಗು ಒಡ್ಡು! — ಆಕಾಶ ಹಱದು ಬೀಱುವಾಗ್ಯೆ ಅಂಗೆಯ್ಯೊಡ್ಡಿದರೆ ನಿನ್ತೀತೇ? (Prvs.). ಭಿಕ್ಷೆಗೆ ಕೆಯ್ಯೊಡ್ಡು! (C.). ಒಡ್ಡಿದ ಕೆಯ್ (ಪ್ರತಲ G.). ಎರಡು ಕರಗಳನ್ ಒಡ್ಡಿ ಬೇಡಿಕೊಮ್ಬುವೆಂ (Sarpabhūṣaṇa in B. 5, 320). see J. 6, 39; 8, 18; Abhā. 2, 4; Prv. s. ಮುಂಜು.

ಒಡ್ಡು oḍḍu. 2. to become opposite; to oppose, to counteract, to resist (ಪ್ರತೀಕಾರ Śmd. Dh.; Te.; Te. ಒಣ್ಣಿಪು = ವಿರೋಧ; ಒಡ್ಡಾಡು, to contradict). ಒಡ್ಡೊಡ್ಡೊಡ್ಡು! ಎನುತೆ ಒಡ್ಡಿ, ಮೇಳದವಳ್ ಕುಂಕುಮವಾರಿ ಕುಪ್ಪಳಿಸಿ ಪೊಯ್ದಳ್ (Śmd. 231). ತೇರೊಡ್ಡು ಗಾಳಿಗೊಡ್ಡಿದ ನೀರದದ ಒಡ್ಡಿನ ವೋಲ್ ಆಗೆ (Abh. P. 13, 73). ಅಡ್ಡಣಮ್ ಒಡ್ಡಿದ ಕಾರ್ಮುಗಿಲೊಡ್ಡಣಮ್, ಇರದೆ ಇಱದು ವಂಚಿಪ ಅಸಿ ಮಿಂಚುವ ಮಿಂಚು (Rśv. 6, 54). ಬಲಮ್ ಎರಡಾಗಿ, ಪೆರ್ಮೆವಡೆದು, ಒಡ್ಡಿ, ವಿಲಾಸದಿ ನಿನ್ದು, ಬೊಬ್ಬೆಗೊಟ್ಟು (13, 83). see Abh. P. 13, 17 va.; *cf.* ಉರುಟು 1? ಒಡ್ಡು 1.

ಒಡ್ಡು oḍḍu. 3. = ಒಟ್ಟು 1. to heap up (My.; Te.).

ಒಡ್ಡು oḍḍu. 4. = ಒಟ್ಟು 2, ಒಡ್ಡ 2, ಒಡ್ಡಿ 2. a heap, a mass; a pile; a stake a play; at bank, a causeway; a large or pompous concourse or gathering; a host, an army; military array (ವ್ಯೂಹ Śmd. Dh.; Hlā.; ಒಟ್ಟು Bhn. 35, o. r. ಮೊತ್ತ; ಭಾರಿ 54; ಸೈನ್ಯ 11; ಗೊಂದಣ Śm. 96; My.; Te.; Te. ಒಣ್ಡು, thick, substantial). [ನಿನ್ನನ್ನನೊರ್ವನಂ ಪಗೆವಡೆಯೊಡ್ಡುಗಳನೊಡೆಯಲ್ಕೆವೇೞ್ದರ್ದ ಧಗಮೆನೆ Pb. 11, 91; ಮೃಗವ್ರಜದೊಡ್ಡೆಂ ಮೃಗರಾಜನಂ ನೆಱೆವುದೇ Ap. 13,57]. 2, the original number whether multiplicand or dividend (Te.; R.; Tu. ಒಡ್ಡೆ, a multiplication table). ಪಡೆಯೊಡ್ಡು (ವ್ಯೂಹ Mr. 468). ಶರವಭ್ರಂಗಳ ಒಡ್ಡೋ? (Bp. 11, 34). ನಾನಾ ದಿಗಸ್ತದ ಧರಣಿಪರು, ಸಚಿವರು, ಪಸಾಯ್ತರು ನೆರೆದುದು; ಅನ್ದಿನ ದಿವಸದ ಓಲಗದ ಒಡ್ಡು ಚಲುವಾಯ್ತು (Bh. 2, 13, 31). ಸಮುದ್ರದ ದಣ್ಡೆಗೆ ಒಡ್ಡುಗಳನ್ನು ಹಾಕಿ (B. 4, 202). see Abh. P. 13, 73. 76; Rśv. 6, 5. 54; J. 3, 16; 6, 10; 16, 37; 26, 69; 28, 24; 33, 23. 26; ಮಳಲೊಡ್ಡು; Prv. s. ದೊಡ್ಡವ. — ಒಡ್ಡುಗೊಳ್. ಕೊಳ್. to form a heap or mass (Abh. P. 1, 110). — ಒಡ್ಡುಂಗಲ್. -ಂ-ಕಲ್. a rock (Rśv. 5, 55 va.). — ಒಡ್ಡು ಮೆಱೆ. to be displayed in masses (Bh. 1, 19, 18). — ಒಡ್ಡುವಲಗೆ. -ಹಲಗೆ. a shield. (Rśv. 6, 11 va.). — ಒಡ್ಡೊಗು. -ಒಗು. to enter an army. ಬಡ್ಡು ಅರಸಿನ ಬಣ್ಟನ್ ಒಡ್ಡೊಕ್ಕರೇನು? (Dp. 148). — ಒಡ್ಡೋಲಗ. -ಓಲಗ. a great assembly, a royal darbār, a royal audience (My.; Te., Tu.; T., also ಒಟ್ಟೋಲಕ್ಕ). [ಸಭಾ ಮಣ್ಟಪದೊಳೊಡ್ಡೋಲಗಂಗೊಟ್ಟು Pb. 9, 28 va.; Ap. 2, 6 va.]; (Cpr. 2, 59). ಅಪಮಾನದೂಟದಿನ್ದುಪವಾಸವೇ ಲೇಸು, ನೃಪನ್ ಅಯ್ದೆ, ಬಡಿವ ಒಡ್ಡೋಲಗಕ್ಕಿನ್ತ ತಪವೆ ಲೇಸೆನ್ದ (Sp.). see Abh. P. 2, 29 va.; Grj. 2, 106 va.; Rśv. 5, 19 va. — ಒಡ್ಡೋಲಗ ಈ. = ಒಡ್ಡೋಲಗಂಗೊಡು. (Bp. 4, 74; 53, 24). — ಒಡ್ಡೋಲಗಂಗೊಡು. -ಂ-ಕೊಡು. to give or hold an oḍḍōlaga (Bp. 36, 50; 37, 56; Rśv. 11, 1 va.).

ಒಡ್ಡುವಿಕೆ oḍḍuvike. putting towards, exposing to. ಧಾನ್ಯಾದಿಗಳನ್ನು ಗಾಳಿಗೆ ಒಡ್ಡುವಿಕೆ (ನಿಷ್ಪಾವ Si. 395).

ಒಡ್ಡ್ಯಾಣ oḍḍyāṇa = ಒಡ್ಡಣ 2, ಒಡ್ಡವಾಣ, ಒಡ್ಡಿವಾಣ, ಒಡ್ಯಾಣ, ಒಡ್ವಾಣ. (ಕಾಂಚಿ, ಮೇಖಲೆ, ಸಪ್ತಕಿ, ಸಾರಸನ G.).

ಒಡ್ಯಾಣ oḍi$_1$-āṇa? = ಒಡ್ಡ್ಯಾಣ, etc. a zone or belt of gold or silver chiefly worn by women (My.; Bp. 59, 3; ಕಾಂಚಿ, ಸಾರಸ Cb.; M. ಉಡಞ್ಞಾಣ್; Tu. ಒಡ್ಯಣೆ, ಒಡ್ಡಾಣ; see ಉಡದಾರ).

ಒಡ್ವಾಣ oḍvāṇa. = ಒಡ್ಯಾಣ, etc. (My.).

-ಒಣ oṇa. 1. = -ಉವಣ. an occasional form of -ಒಣ, q. v. (My.).

ಒಣ oṇa. 2. becoming dry; the state of being dry, withered, etc., sapless, profitless, empty (C.; Tu.). — ಒಣಕೆಯ್. a dry hand (C.). 2, a withered hand (My.). — ಒಣಕೆಲಸ. useless business (C.). — ಒಣಗಾಯಿ. -ಕಾಯಿ. dry fruit (ಶುಷ್ಕಫಲ Si. 123; My.). — ಒಣಗಿಡ. a dry tree (S. Mhr). — ಒಣಜ್ವರ. a harmless fever (C.). — ಒಣತಿಣ್ಡೆ. a kind of itching in the skin without a visible eruption (C.; ಕಣ್ಡು, ಕಣ್ಡೂಂಪಿ G.). 2, dry food, as parched corn or pulse (My.). ಒಣತಿಣ್ಡಿ ತಿನ್ದರೆ ಬಾಯಿ ಆಱುತ್ತದೆ (Prv.). — ಒಣದಣ್ಟು. a dry stalk, especially of jōḷa (C.). — ಒಣದೊಗಲು. -ತೊಗಲು. a dry hide; leather (C.; B. 5, 262). — ಒಣನೆಲ. dry land (B. 4, 98); a dry ground or soil (C.). — ಒಣಪಡಿ. a gift of dried *i. e.* uncooked rice (Mr. H. Haigh). 2, = ಒಳಪಡಿ. ತೂಕದ ಕಮ್ಮಿಯಾದ ಭಾಗ (Rāmasvāmi Śāstri). — ಒಣಮಾತು. a senseless, useless word (C.). — ಒಣಮೋಱೆ. a dejected, sad countenance (S. Mhr.). 2, a face that indicates fasting (My.). — ಒಣರಗಳೆ. useless talk (C.; B. 4, 53). — ಒಣರವದಿ. dried leaves or straw of jōḷa (S. Mhr.). — ಒಣಸಂಶಯ. groundless suspicion (C.). — ಒಣಸಗಣಿ. dry cowdung (C.; ಕರೀಷ Si. 315). — ಒಣಸೊಣ್ಟಿ. dry ginger (C.; ಶುಣ್ಠಿ Si. 311). — ಒಣಹರಟೆ. = ಒಣರಗಳೆ. (C.). ಒಣಹುರಕು. = ಒಣತಿಣ್ಡಿ No. 1. (S. Mhr.). — ಒಣಹುಲ್ಲು. dried grass, hay, straw (C.; ಕಕ್ಷ G.). — ಒಣಹೆಮ್ಮೆ. idle assumption and display, vain pride (C.; B. 2, 12; 4, 49; ಡಮ್ಭಾಚಾರ G.).

ಒಣಕ oṇa-ka. an emaciated man. (Śmd. 241). 2, = ಒಣ 2, ಒಣಕು 1, ಒಣಗು 2. (My.).

ಒಣಕು oṇaku. 1. = ಒಣಕ No. 2. the state of being dry. (My.).

ಒಣಕು oṇaku. 2. = ಬಳಕು. to tremble, to shake (ಸ್ಫುರಣ ಸ್ಪುರಣ Si 389; Te. ವಡಕು, ವಣುಕು; *cf.* ಒಣೆ).

ಒಣಗಿಲು oṇagilu. -ಲ್. the state of being dry (My.; Tu. ಉಣ್ಂಗೇಲ್). ಛಟಛಟಸಿ, ಶಿಖಿ ಪುಟವಿಟ್ಟುದು ಒಣಗಿಲು ಹೊದಱುವಲಿ (Bh. 1, 20, 55).

ಒಣಗಿಸು oṇagisu. to cause to dry, to dry; (v. t.), etc. (C.; Bp. 4, 73; B. 3, 29. 46. 95; 5, 295).

ಒಣಗು oṇagu. 1. to dry, to become dry; to become sapless; to wither; to emaciate (v. i.; ಶೋಷಣ Śmd. Dh.; C.; J. 9, 32; 23, 56; 26, 39; T. ಉಣಂಗು, ಉಲರು). ಒಣಗಿದ ಎಲೆ (ಪಱಗ Śmd. 1). [ಒಣಗಿದುದೊನ್ದು ಪೆರ್ವಿದಿರ ಪೆರ್ವೊಡಱಂ ಮೊರೆದುರ್ವುವಾಶುಶುಕ್ಷಣಿಯ ವೊಲ್ Pb. 11, 94]. ಸೀಳ್ದು ಒಣಗಿ ಬಾಟ್ದ ಶಾಖ (ಬಾಟುಕ Śmd. I). ಒಣಗಿದ ಕಾಯಿ (ವಾನ, ಶುಷ್ಕಫಲ Hlā.; ವಾನ, ಶಲಾಟು Nn. 90), ಒಣಗಿದ ಮರ (ಕಾಷ್ಠ, ದಾರು); ಗೋಮಯವಮ್ ಒಣಗಿದಡೆ ಕರೀಷ ಎನಿಸುಗು (Nr.). ಒಣಗಿದ ಮಿಡಿ (ಶುಷ್ಕಫಲ Si. 123). ಒಣಗಿದ ಮಾಂಸ (ಉತ್ತಪ್ತ, ಶುಷ್ಕಮಾಂಸ 204). ಒಣಗಿದ ಕಾಡು (ಕಕ್ಷ 461). ಒಣಗಿದ ಬಿದಿರ ಮೆಳೆ (Bh. 1, 20, 27). ಆ ವಲ್ಲಭಂ ಬಿಸಿಲೊಳಗೆ ಒಣಗಿದಹಂ (Bp. 18, 37). ಸಸ್ಯಂಗಳುಮ್ ಒಣಗಿದವು (57, 47). ಅಘ ತಿನ್ದುವವರ...ರಕ್ತ ಮಾಂಸವೆಲ್ಲ ಸುಟ್ಟು, ಮೆಯ್ ಒಣಗಿ ಹೋಗುವದು (B. 4, 41). ಒಣಗಿದ ಕಾಡಿಗೆ ಕಿಚ್ಚು ಬಿದ್ದ ಹಾಗೆ.— ಒಣಗಿದ ಎಲೆ ಉದುರುವಾಗ್ಗೆ ಹಸಿಯೆಲೆ ನಗಾಡುತ್ತದೆ (Prvs.).

ಒಣಗು oṇagu. 2. = ಒಣಕು 1, etc. the state of being dry (My.). — ಒಣಗುದೋಱ್. dryness to appear; to become dry. ಒಣಗುದೋರ್ವ ಕಾಯಿ (ವಾನ Mr. 109).

ಒಣರ್ oṇar. to feel, to perceive, to understand (Kāvy. III, 3, 35; T. ಉಣರ್; *cf.* ಉನ್ನಿಸು). [ಹತೋಶ್ವತ್ಥಾಮಾ ಎನೆ ನೃಪನಶ್ವತ್ಥಾಮನೆಗೆತ್ತೊಣರ್ದನೊವಜನೊರ್ವೆಸಂಭ್ರಮಂ Pb. 12, 27; Ap. 12, 27]; (Cpr. 10, 56).

ಒಣೆ oṇe. = ಒನೆ. to shake corn in a fan.

ಒಣ್ಟಿ onṭi. 1. (fr. ಉಱು). being joined: one, single, alone (C.; ಏಕ, ಕೇವಲ Si. 408; Te., Tu.; M. ಉಱ್ಱ; T. ಒಣ್ಡಿ, ಒಱ್ಱೈ). see Prv. s. ತಣ್ಟೆ 2. — ಒಣ್ಟಿಕೊಮ್ಬು. a single tusk (My.). — ಒಣ್ಟಿಕೋಡೊಲೆ. a kind of ole (as described s. ಒಲೆ 4, My.). — ಒಣ್ಟಿಗಣ್ಣು. ಕಣ್ಣು a single eye (C.). — ಒಣ್ಟಿಗೆಯ್ಯ. -ಕೆಯ್ಯ.

a one-handed man (My.). — ಒಣ್ಟಿದೋತ್ರ. a single dōtra. (C.). — ಒಣ್ಟಿದೋಳ. -ತೋಳ. a single, solitary wolf (B. 3, 85). — ಒಣ್ಟಿ ದೋಳು. -ತೋಳು. a single arm (C.). — ಒಣ್ಟಿ ಸಣ್ಟಿ. dupl. quite alone (My.). — ಒಣ್ಟಿಸರ. a single string of pearls (ಏಕಾವಲಿ, etc. Si. 219). — ಒಣ್ಟಿಸಲಗ. the head of a flock or herd, as a large elephant, etc. (My.). — ಒಣ್ಟಿತ್ತು. -ಎತ್ತು. a single bullock (C.). — ಒಣ್ಟಿಲುವಿನವ. -ಎಲುವಿನವ. a man of mere bones, a weak man (S. Mhr.). — ಒಣ್ಟೊಲೆ. -ಒಲೆ. a kind of oven (as described s. ಒಲೆ 4, My.).

ಒಣ್ಟಿ oṇṭi. 2. a sort of large gold earring (C.; ಕುಣ್ಡಲ, ಕರ್ಣವೇಷ್ಟನ, ಹತ್ತಕಡಕು Si. 218, sic !; Tu.; Te. ಒಣ್ಟು; T. ಒಟ್ಟು?). ಒಣ್ಟಿ ಮಾಱು, ತಣ್ಟೆ ತೀರಿಸಿದರೂ ವಣ್ಟಿ ಕೋಲ ಬಿಡಲಿಲ್ಲ. — ನೀನು ಒಲೇ ಕಿವಿಯವಳನ್ನು ನೋಡಿದರೆ ನಾನು ಒಣ್ಟೀ ಕಿವಿಯವನನ್ನು ನೋಡುತ್ತೇನೆ (Prvs.).

ಒಣ್ಟೆ oṇṭi. = ಒಣ್ಟಿ, etc. (S. Mhr.).

ಒಣ್ಟಿಗ oṇṭiga. (= ಉಣ್ಡಿಗ?). a single or solitary man, one who is quite alone (ಏಕಾಕಿ, ಏಕ, ಏಕಕ Si. 375; C.; Tu., Te.; *cf.* ವಣ್ಟಿಕ). ಒಣ್ಟಿಗನಾದರೂ ತಣ್ಟೆ ಮಾಡೋದು ಬಿಡಲಿಲ್ಲ. — ಒಣ್ಟಿ ಗನನ್ನು ನಮ್ಬುವದು ಕುಣ್ಟಗಾಲನನ್ನು ನವ್ಬಿ ಪಯಣ ಮಾಡಿದ ಹಾಗೆ (Prvs.).

ಒಣ್ಟಿಗತನ oṇṭigatana. loneliness, solitude (My.).

ಒಣ್ಟಿಗಾಱ oṇṭi-gāṟa. = ಒಣ್ಟಿಗ, ಒಣ್ಟೆಗಾಱ. (My.).

ಒಣ್ಟಿಗಿತ್ತಿ oṇṭiga-itti. a single or solitary woman (C.).

ಒಣ್ಟಿತನ oṇṭitana. = ಒಣ್ಟಿಗತನ. (My.).

ಒಣ್ಟು oṇṭu. to agree (with one's health), to be salubrious (My.; Te.; T. ಒಣ್ಣು).

ಒಣ್ಟೆ oṇṭe. = ಒಟ್ಟೆ, ಒಣ್ಟೆ. Tbh. of ಉಷ್ಟ್ರ. a camel (Mr. 184; C.; J. 5, 13. 73; 16, 24; Si. 323; see also Si. 88. 268. 324; Te., Tu.). ಒಣ್ಟೆಗೆ ಸೊಣ್ಟವೇನು? ಕುತ್ತಿಗೆಯೇನು? (Prv.).

ಒಣ್ಟೆಗಾಱ oṇṭe-gāṟa. = ಒಣ್ಟಿಗಾಱ. (My.). see ಅಣ್ಣಾ-.

ಒಣ್ಡಿ oṇḍi. a bank, a shore (S. Mhr.; *cf.* ಒಡ್ಡು 4).

ಒಣ್ಡು oṇḍu. = ಒಟ್ಟು 2 No. 3, ವಣ್ಡು. sediment, deposit, lees, dregs; the muddy deposit of a flood, river or tank; mud in tanks; muddiness, turbidness (My.; Te. ಒಣ್ಡು, ವಣ್ಡು; *cf.* ಬಣ್ಡಲು). ಒಣ್ಡಾಗಿ ಇರುವದು (ಕಲುಷ, ಅನಚ್ಛ, ಆವಿಲ, ಕೆಸಱು ಕದಡಿ ಕಲಕಾಗಿ ಒಣ್ಡು ಬಾರಿ ಕೊಣ್ಡು ಇರುವಿಕೆ Si. 86). — ಒಣ್ಡುಬಾರು. -ಪಾರು. to become mud or muddy (Si. 86).

ಒಣ್ಡೆ oṇḍe. 1. = ಒಣ್ಡು? ಚಳಿಯುಮನ್ದು ಸಿಪ್ಪಿಸುವುದು. ಒಣ್ಡೆಗೆ ಪೋಪುದುಮ್ ಅಕ್ಕು (Śs.).

***ಒಣ್ಡೆ oṇḍe.** 2. = ಒಣ್ಡಿ. also side etc. [ಗಿಡು ಮರಬಳ್ಳಿಗಳ ನಾರುಬೇರುಗಳ ಶರೀರದೊಣ್ಡೆಯಲ್ಲಿ ಧರಿಸಿದಡೆ, ರೋಗಿಯ ಹಲವು ರೋಗ ಗಳು ನಷ್ಟವಪ್ಪ ಪರಿಯನ್ತೆ Cv. 41].

ಒತ್- ot. = ಒಕ್1-, etc. one. — ಒತ್ತಟ್ಟು. one side; aside (C.; Tu.). frequently ಒತ್ತಟ್ಟಿಗೆ, to, or on one side; aside. see B. 1, 25; 3, 20. 86. 101. 105; 5, 163. 286. — ಒತ್ತಣ್ಡ. one mass or company (My.). — ಒತ್ತರ. one layer, partition or division. see ಪಣ್ಣೊತ್ತರ. — ಒತ್ತೞ. one kind or sort (My.). — ಒತ್ತೋಳ್. one arm (J. 14, 15; 16, 20).

ಒತ್ತಟ್ಟ ottu₅-aṭṭa₁. the nightmare (My.).

ಒತ್ತಡ ottaḍa. (fr. ಒತ್ತು3). = ಒತ್ತಲ, ಒತ್ತಳ. fomentation (My.; T. ಒಱ್ಱಲ್, ಒಱ್ಱಡ). 2, (fr. ಒತ್ತು1). pressure; that has been pressed into. — ಒತ್ತಡಂಗಲಿಸು. -ಂ-ಕಲಿಸು. to dip firmly into and apply (V. 14, 28).

***ಒತ್ತಮ್ಬ ottamba.** force, pressure. ದ್ರೋಣನೊತ್ತಮ್ಬದಿ ನ್ದೊಳಗಂ ಪೊಕ್ಕು Pb. 2, 47 va.; ಪುಳಕಪ್ರೋದ್ಭೇದ ಘರ್ಮೋದಕ ವಿಸರ ಮನೊತ್ತಮ್ಬದಿಂ ತಾಗೆಯುಂ Ap. 4, 51.

ಒತ್ತಮ್ಬರ otta = ottu₅-m-bara (= bhara?). great haste (Bh. 1, 5, 15).

ಒತ್ತರ ottara. impetuousness; force; speed; quickly, etc. (C.; Grj. 2, 106 va.). [ತಕ್ಕನನ್ತೆ ನಪ್ಪಿಸಿಯುಮೊತ್ತರದನ್ತೊತ್ತಿ ಯುಂ Pb. 5, 46 va.]. ಒತ್ತರಮ್ ಒತ್ತಿದನ್ತೆ ಬೆಱಗಾಗಿ ಕೃಪಾದಿಗಳ್ ಒತ್ತೆ (Śmd. 16). ಗಾಳಿಯು ಒತ್ತರದಿನ್ದ ಉರಿಯನ್ನು ಒತ್ತಿ ಹಿನ್ದಕ್ಕೆ ಸರಿಸಿ ದಾಗ (B. 5, 165).

ಒತ್ತರಿಸು ottarisu. to be amassed, redundant, or plentiful; to increase; to be or become lofty, haughty, impetuous, pressing, quick, or effective [ನಿರನ್ತರಂ ತಿರಸ್ಕ ರಿಸಿರೆ ಘೂರ್ಣಿತಾರ್ಣವಮನೊತ್ತರಿಸಿತ್ತು ಚತುರ್ಬಲಾರ್ಣವಂ Pb. 10, 28: Ap. 3, 10]; (Cpr. 8, 79; ಉದ್ವೃತ್ತಿ Śmd. Dh., o. r. ಉದ್ವೃತ್ತೆ; Grj. 4, 104 va.; Bp. 3, 36; 5, 43; 13, 13; 18, 61; 32, 28; 38, 17. 40; 43, 37; 44, 71; 45, 32; 53, 57; 55. 55; 56, 13; 58, 63; Rśv. 1, 133 va.; 1, 134; 5, 25; 6, 5; 6, 24 va.; 13, 77; J. 3, 18; 4, 7. 19; 12, 25; 15, 4; 19, 40; 20, 28; 22, 2; 27, 4). 2, to cause to be amassed, etc.; to join closely (v. t.); to subdue; to throw into shade (Bp. 32, 6; 35, 56; 46, 78; 58, 53; Rśv. 6, 11 va.); to push (My.).

ಒತ್ತಲ ottala. = ಒತ್ತಳ, etc. (My.).

ಒತ್ತಳ ottaḷa. = ಒತ್ತಡ No. 1. (My.).

ಒತ್ತಾಯ ottu₅-āya₂. impetus, impetuousity; force, violence; importunity (J. 10, 58; 18, 45; 20, 50. 61; 21, 31; 25. 47. 59; 27, 8; My.); compulsion (My.).

ಒತ್ತಾಸೆ ottu₅-āse. help, assistance (J. 20, 42; My.; T. ಒತ್ತಾಶೈ, M. ಒತ್ತಾಶ).

ಒತ್ತಾಸೆಗಾಱ ottāse-gāṟa. a male helper or assistant (My.). feminine. ಒತ್ತಾಸೆಗಾತಿ (My.).

ಒತ್ತಿಕೆ ottike. pressing, etc. (My.).

ಒತ್ತಿಸು ottisu. to cause to press, etc. (My.); to place firmly, to fix (Bp. 16, 10).

ಒತ್ತು ottu. 1. (fr. ಉಱು). to press together, to press, to squeeze [ನಿಲಿಸಿ ಲಘು ಪದಮನದನಗ್ಗಲಿಸಿರೆ ಮತ್ತೊತ್ತಿಬರ್ಪ ಪದ ಮಂ ತುದಿಯೊಳ್‌ನಿಲೆ ಪೇೞ್ದಾಗಳ್ Kr. 2, 6; Pb. 1, 26; Ap. 2, 38]; (Śmd. 16. 91; C.; Te.; Bp. 15, 18; 18, 58; 21, 42; 22, 15; 27, 13; 35, 11; 38, 56; 43, 30; 45, 27. 53; 47, 60; 57, 82; J. 6, 31; 2, 27; 15. 47; 20, 19; 23, 38; 25, 55; 26, 6; 14, 15); to shampoo (Śmd. 297; Bp. 1, 46); to press down; to press into (Bp. 3, 36; 25, 25); to impress, as a seal (Bp. 9, 45; 28, 41; 52, 47; Abhā. 1, 43); to push (Bp. 55, 28); to subdue, to overpower, to rule (J. 29, 9. 22); to grasp (Līlv. 3, 2; J. 26, 21); to trouble, to harass (Bp. 24, 55; 40, 46; J. 2, 16; 22, 35); to take away

by gentle pressure with a cloth, as fluids (Bp. 47, 15); to use unusual force or power, as in speaking, calling, praying, etc. (Bp. 3, 6; 5, 39; 11, 43; 44, 61; 50, 39; 26, 8; 44, 72; Bh. 1, 8, 15; J. 4, 31; 5, 15; 9, 15; 14, 7; 20, 14. 28; 24, 17; 25, 24; 26, 6; B. 3, 21), when the P. p. ಒತ್ತಿ may be translated by *firmly*, *powerfully*, *loudly*, *with force*, *gravely*, *roughly*, *vehemently*, *greatly*, *etc.*; to stress, to emphasize, as a word (B. 3, 6); to stress, as a letter; to make abundant (J. 9, 15). (ಆಕ್ರಮಣ Śmd. Dh.; ಅತಿಕ್ರಮಣ Śm. 97; see ಉದ್ದಿ). ಒತ್ತಿದಪಂ (Śmd. 260). ಒತ್ತಿ ಚಪ್ಪಟೆ ಆಡುದು (ಕಚ್ಚಟಿ Śmd. I). ಪಾದಾದ್ಯಂಗಮಂ ಒತ್ತುವದು (ಸಂವಾಹನ, ಮರ್ದನ Nr.). ತೊಡರೆ ಮಿಾನ್ ಮೃಗಲಾಂಛನಧೀವರಂ ತಡಿಗೆ ಬೀಸಿದ ಜಾಲಮನ್ ಒತ್ತಿ, ತನ್ದು, ಅಡಸಿ, ಬಾನ್ದೊಱೆಯೊಳ್ ತೆಗೆವನ್ತೆ ಒನ್ದೆಡೆಗೆ ಬನ್ದುವು ತಣ್ಣದಿರ ಓಳಿಗಳ್ (Līlv. 3, 2). ಒತ್ತಿ ನಡೆಯುವದು (ಮಹಾಪ್ರಾಣ Mr. 52). see Rām. 5, 8, 72 where ಒತ್ತುವಲ್ಲಿವ, which perhaps is meant for ಒತ್ತುವ ಅಲಿಲುವ. [—ಒತ್ತಿಕೊಳ್. to encroach upon, to push back. ಧರಿತ್ರಿಯಂ ಜೀಯೆನೆ ಬೇಡಿಕೊಳ್ಳದೆ ವಿರೋಧಿ ನರೇನ್ದ್ರರನೊತ್ತಿಕೊಣ್ಡು Pb. 1, 1]. — ಒತ್ತಿವಿಡಿ. -ಪಿಡಿ. to grasp, to seize, to lay hold of (J. 25, 61). — ಒತ್ತೊತ್ತು. rep. (Bp. 15, 8; 18, 62; 38, 38). [2, to blow as conch. ಪಗೆವರ ಗಣ್ಪಲನೊತ್ತುವನ್ತೆ ಪೌನ್ಡ್ರಮೆನ್ಬ ಶಂಖುವನೊತ್ತಿ ಮುನ್ದೊಡ್ಡಿದೊಡ್ಡೆಲ್ಲಮನವ್ಬಿನ ಬನ್ಬುಲೊಳೆ ಪಡಲ್ವಡಿಸುತ್ತುಂ Pb. 10, 97 va.].

ಒತ್ತು ottu. 2. to give way, to leave space, to step aside (My.; Tu., Te.; T., M. ಒಱು; *cf.* ಒದಗು 1 No. 2).

ಒತ್ತು ottu. 3. to foment (My.; Te.; T. ಒಱು; T. also: to move).

ಒತ್ತು ottu. 4. to cut or break betel-nut (Te.; R.).

ಒತ್ತು ottu. 5. the state of being pressed, joined, close together, or amassed; union; a mass; closeness; thickness; a pile; the bank of a river; the being contiguous or near, vicinity; a rising mass; the flood-tide; pressure; impression; grasp, hold; the state of being doubled; a double consonant; the state of being multiplied (ನದಿತೀರ Śmd. Dh.; ಪೊಱೆಯ ತೀರ Śm. 97; ದ್ವಿತ್ವ Śmd. 179. 370 Cm.; ಗುಣಿತ Mr. 349; My.; Te., Tu.). ಒತ್ತಾಗಿಯೂ ಗುಮ್ಪಾಗಿಯೂ ಇರುವದು (ಸಾನ್ದ್ರ, ಸ್ನಿಗ್ಧ Si. 361). ಒನ್ದಕ್ಕೊನ್ದು ಸೇರಿಕೊಣ್ಡು ಒತ್ತಾಗಿ ಇರುವನ್ಥಾದು (ಘನ, ನಿರನ್ತರ, ಸಾನ್ದ್ರ 371). ಅಖಿಲಭಕ್ತರ ಮಹಾಗ್ರಹದ ಒತ್ತನ್ ಆಲಿಸಿ (Bp. 26, 23). ಪುಷ್ಪವಾಟಿಕೆ ವೃನ್ದದ ಒತ್ತಿನೊಳ್ ಅಯ್ದಿ ಭೂಪತಿ ದಣ್ಡು ಬಿಟ್ಟಿರಲು (22, 28). ಊರೊಳಗಣ ಅರಮನೆಗಳ ಒತ್ತಿನಲ್ಲಿಹ ವನಮ್ ಅದು ಉದ್ಯಾನಮ್ ಎನ್ದು ಎನಿಕ್ಕುಂ (Mr. 152). ನಗರದ ಒತ್ತಿನ ಬೀಡು (ಉಪನಗರ, etc. 190). ಕುಮುರೆಯ ಎರಡು ನಡುದನ್ತಗಳು ಸನ್ದಶನಮ್ ಅಕ್ಕು, ಒತ್ತಿನ ಎರಡು ಪಲ್ಗಳು ಮಧ್ಯಮಂಗಳ್ ಅಕ್ಕು, ಅವಱ ಒತ್ತಿನ ಎರಡು ದ್ವಿಜಂ ಪಾರಿಪಕ್ಷಂಗಳ್ (Mr. 281). ಒತ್ತಿನಲ್ಲಿಹ ವಾರ್ಧಿಭೂಸಂಚಯಿಂ ಮೇಲೆ ಕಾಲ್ಸಂಚಿ ಪೆರ್ಚಿ ತೋರ್ಕುಂ (326). ಎಲ್ಲರೊತ್ತಿನಲಿ ಕಳುವನಂ (226). ಹೆಬ್ಬೊಟ್ಟಿನ ಒತ್ತಿನ ಬೆರಳು (ತರ್ಜನಿ Nr.; see Si. 211). ನೀರೊತ್ತು (ವೇಲೆ Hlā.). ಒತ್ತಿನಕ್ಕರಂ (ದಡ್ಡಕ್ಕರಂ Śmd. 38 Cm.; ದ್ವಿತ್ವಾಕ್ಷರಂ 71 Cm.). ಫಣಿರಾಜನ ಒತ್ತಿನೊಳು ಹಣವು ಇದ್ದರೇನು? (Dp. 167). see Ch.; Bp. 16, 10; 22, 49; 26, 34; 30, 10. 13; 32, 17; 46, 5; 47, 9; 53, 58; 55, 34; 60, 23; C. Bp. 2, 4; 42, 15; Rām. 5, 9, 34; J. 3, 17; 14, 15; 12, 10. 20; 24, 72; ಉಗುರೊತ್ತು, ಕಲ್ಲೊತ್ತು, ಕವಲೊತ್ತು, ತಲೆಯೊತ್ತು. — ಒತ್ತಕ್ಕರ. -ಅಕ್ಕರ. a double consonant (ದ್ವಿತ್ವಂ Śmd. 47 Cm.; Ch.). ಮುನ್ದೆ ಒತ್ತಕ್ಕರಮ್ ಇರಲು, ಪಿನ್ದೆ ಗುರುವಕ್ಕು (Mr. 363). — ಒತ್ತಾನೆ. -ಆನೆ. a tame elephant used to catch wild ones (My.). — ಒತ್ತಾಳು. -ಆಳು. a helper (My.). — ಒತ್ತಿಗೆ ಹಾಕು. to heap up, to lay up, as fruits for maturing (B. 2, 51; My.). — ಒತ್ತುಗವ್ಪು. -ಕವ್ಪು. a prop (My.). — ಒತ್ತುಗುಡು. -ಕುಡು. to join, to go near (Abh. P. 9, 146). — ಒತ್ತುಗುಣ್ಡಣೆ. -ಕುಣ್ಡಣೆ. a coiled snake (Mr. 207). — ಒತ್ತುಗೊಡು. -ಕೊಡು. to prop (My.). — ಒತ್ತುಗೊಳ್. -ಕೊಳ್. to join, etc. ಇನಂ ತುಹಿನಾದ್ರೀನ್ದ್ರಮನ್ ಒತ್ತುಗೊಣ್ಡು ನಡೆವಂ (Śmd. 260 Mdb. MS.). see J. 3, 20; Rśv. 4, 9. [to hide oneself. ಕೆಲಬರ್ ಕಣ್ಡೊಡೆ ಕರೆಗುಮೆನ್ದು ಕೆಲದ ಮರಂಗಳನೊತ್ತುಗೊಣ್ಡು Ap. 9, 92 va.]. — ಒತ್ತುಂಗುರ. -ಉಂಗುರ. a thin tight ring put on the finger or toe to tighten other more precious rings (My.). [—ಒತ್ತುಂಗರಡೆ. -ಕರಡೆ. a percussion musical instrument. ಒತ್ತುಂಗರಡೆಯ ಮದ್ದಳೆಯ ಜರ್ಝರ ಧ್ವನಿಗಳವೋಲ್ Kr. 1, 53]. — ಒತ್ತುಬರ್. to come near, to afford help (Śśv. 4, 106). — ಒತ್ತುಬೆರಳು. the finger adjoining (the thumb), the forefinger. ಹೆಬ್ಬೆಟ್ಟಿನ ಒತ್ತುಬೆರಳು. (ಪ್ರದೇಶಿನಿ Si. 211). — ಒತ್ತುಬೇಲಿ. a bound hedge (ಪ್ರಾಚೀನ Nr.). — ಒತ್ತುವಲ್ಲಿವ. see note s. ಒತ್ತು 1. — ಒತ್ತುವಿಡಿ. -ಪಿಡಿ. to join, to adjoin. ಗಿರಿನಗರಾದಿಗಳ ಒತ್ತುವಿಡಿದು ಪೋಪುದು (ಪರಿಸರ್ಯೆ, ಪರೀಸಾರ Nr.). — ಒತ್ತುಹಂಜರ. a covering fastened under the rafters of a roof (My.). — ಒತ್ತೊರಳು. -ಒರಳು. a kind of mortar with holes for forcing batter or dough through in the form of threads (C.).

ಒತ್ತು ottu. 6. = ಹೊತ್ತು 2. time (My.). see ಅಷ್ಟೊತ್ತು, ಇಷ್ಟೊತ್ತು, ಹೊತ್ತೊತ್ತು.

